ಕೊಯ್ಲೋತ್ತರ ಯಾಂತ್ರೀಕರಣ ವಿಜ್ಞಾನ ಮತ್ತು ತಂತ್ರಜ್ಞಾನ, ಕಳೆನಿರ್ವಹಣೆ ಹಾಗೂ ಸೂರ್ಯಕಾಂತಿ ಬೆಳೆ ಯೋಜನೆಗಳ ಕುರಿತ ಅಖಿಲ ಭಾರತ ಸಂಯೋಜಿತ ಸಂಶೋಧನಾ ಪ್ರಾಯೋಜನೆಗಳು ತಂತ್ರಜ್ಞಾನಗಳ ಅಭಿವೃದ್ಧಿಯಲ್ಲಿನ ಅತ್ಯುತ್ತಮ ಕೊಡುಗೆಗೆ ಮನ್ನಣೆಯನ್ನು ಪಡೆದಿವೆ ಮತ್ತು ಆಯಾ ನಿರ್ದೇಶನಾಲಯಗಳು ಆಯೋಜಿಸಿದ್ದ ವಾರ್ಷಿಕ ಗುಂಪು ಸಭೆಗಳಲ್ಲಿ 'ಅತ್ಯುತ್ತಮ' ಅಖಿಲ ಭಾರತ ಸಂಯೋಜಿತ ಸಂಶೋಧನೆಗಳ ಯೋಜನಾ (ಎ.ಐ.ಸಿ.ಆರ್.ಪಿ.) ಕೇಂದ್ರಗಳೆಂದು ಪರಿಗಣಿಸಲ್ಪಟ್ಟಿವೆ ಎಂಬುದನ್ನು ತಿಳಿಸಲು ಆನಂದವೆನಿಸುತ್ತದೆ. ಈ ಸಂಸ್ಥೆಯಿಂದ ತರಬೇತಿ ಮತ್ತು ಮಾನ್ಯತೆ ಪಡೆಯುವುದರೊಂದಿಗೆ, ವೈವಿಧ್ಯಮಯ ಕೃಷಿ ಕ್ಷೇತ್ರಗಳಲ್ಲಿನ ವಿವಿಧ ಸವಾಲುಗಳು ಮತ್ತು ಸಮಸ್ಯೆಗಳನ್ನು ಎದುರಿಸಲು ಸರ್ವಸನ್ನದ್ಧರಾಗಿರುವಿರಿ ಎಂಬ ವಿಶ್ವಾಸವು ನನಗಿದೆ.

ಕೃಷಿ ಸಂಶೋಧನಾ ಕ್ಷೇತ್ರದಲ್ಲಿನ ಅತ್ಯುತ್ತಮ ಸಂಶೋಧನಾ ಸಾಧನೆಗಳಿಗಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ಸ್ಥಾಪನೆಯಾದಗಿನಿಂದ ಇಲ್ಲಿಯವರೆಗೆ ಬೆ-ಕೃ.ವಿ.ವಿ.ವು ವಿವಿಧ ಬೆಳೆ ವಿಭಾಗಗಳಲ್ಲಿ 321 ರೀತಿಯ ಅಧಿಕ ಇಳುವರಿ ನೀಡುವ ಬೆಳೆ ಪ್ರಭೇದಗಳು/ ಸಂಕರ ತಳಿಗಳನ್ನು ಪರಿಚಯಿಸಿರುವುದು ಕೃಷಿ ಕ್ಷೇತ್ರದಲ್ಲಿನ ತನ್ನ ಕೊಡುಗೆಯನ್ನು ಎತ್ತಿತೋರಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ವಿವಿಧ ವಲಯಗಳಲ್ಲಿನ ಬೇಸಾಯಕ್ಕಾಗಿ ಅಕ್ಕಿ, ಜೋಳ, ಕಂದು ಬಣ್ಣದ ರಾಗಿ, ಅವರೆ, ಗುರೆಳ್ಳು, ಹರಳು, ಎಳ್ಳು, ಸೂರ್ಯಕಾಂತಿ ಮತ್ತು ಮೇವಿನ ಜೋಳ ಮುಂತಾದ ಅನೇಕ ಹೊಸ ಬೆಳೆ ಪ್ರಭೇದಗಳನ್ನು ಬಿಡುಗಡೆ ಮಾಡಿದ್ದಾರೆ.

ಈ ವಿಶ್ವವಿದ್ಯಾನಿಲಯವು ಪ್ರಥಮವಾಗಿ ಹತ್ತಿ ಬೆಳೆ ಮತ್ತು ಎರಡನೆಯದಾಗಿ ಭತ್ತದ ಬೆಳೆಗಳ ಮಿಶ್ರತಳಿಗಳನ್ನು ಅಭಿವೃದ್ಧಿಪಡಿಸುವಲ್ಲಿ ಅದ್ಯಪ್ರವರ್ತಕವಾಗಿದೆ. ಸೂರ್ಯಕಾಂತಿ ಮತ್ತು ರಾಗಿಗಳಂತಹ ಒಣಬೇಸಾಯ ಬೆಳೆಗಳಿಗಾಗಿ ತಂತ್ರಜ್ಞಾನಗಳು ಮತ್ತು ತಳಿಗಳ ಸುಧಾರಣೆಯಲ್ಲಿನ ವಿಶ್ವವಿದ್ಯಾನಿಲಯದ ಕೊಡುಗೆಯು ನಿಜವಾಗಿಯೂ

ಶ್ಲಾಘನೀಯವಾಗಿದೆ. 2000ದ ಇಸ್ವಿಯಿಂದ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 480 ಕೃಷಿ ತಂತ್ರಜ್ಞಾನಗಳ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದು, ಇದು ದಕ್ಷಿಣ ಭಾರತದ ಮಳೆಯಾಧಾರಿತ ಕೃಷಿ ಕ್ಷೇತ್ರದ ಮೇಲೆ ಆಗಾಧ ಪ್ರಭಾವವನ್ನು ಬೀರಿದೆ.

ಇತ್ತೀಚಿನ ವರ್ಷಗಳಲ್ಲಿ, 35ಕ್ಕೂ ಹೆಚ್ಚು ಹೊಸ ತಂತ್ರಜ್ಞಾನಗಳನ್ನು ಸುಧಾರಿತ ಬೇಸಾಯ ಪದ್ಧತಿ ಕೈಪಿಡಿಯಲ್ಲಿ ಸೇರಿಸಿಕೊಳ್ಳಲು ಶಿಫಾರಸ್ಸು ಮಾಡಲಾಗಿದೆ ಮತ್ತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅನೇಕ ಹಕ್ಕುಸ್ವಾಮ್ಯತೆಯನ್ನು ನೀಡಲಾಗಿದೆ ಎಂಬುದನ್ನಿಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಈ ಸಾಧನೆಗಳು ವಿಶ್ವವಿದ್ಯಾನಿಲಯದಲ್ಲಿನ ಸಂಶೋಧನೆ ಮತ್ತು ಶಿಕ್ಷಣದ ಅಸಾಧಾರಣ ಗುಣಮಟ್ಟ ಮತ್ತು ಕೃಷಿ ಕ್ಷೇತ್ರದ ಪ್ರಗತಿಗೆ ವಿಶ್ವವಿದ್ಯಾನಿಲಯದ ಅಧ್ಯಾಪಕರು ಮತ್ತು ಸಿಬ್ಬಂದಿಗಳ ಸಮರ್ಪಣಾಭಾವಕ್ಕೆ ಸಾಕ್ಷಿಯಾಗಿದೆ.

ವಿಶ್ವವಿದ್ಯಾನಿಲಯವು ತನ್ನ ಶೈಕ್ಷಣಿಕ ಪಠ್ಯಕ್ರಮವನ್ನು ಪರಿಷ್ಕರಿಸುತ್ತಿರುವುದು ನನ್ನ ಗಮನಕ್ಕೆ ಬಂದಿದ್ದು ಇದು ಬದಲಾಗುತ್ತಿರುವ ಕಾಲಘಟ್ಟಕ್ಕನುಗುಣವಾಗಿ ವಿದ್ಯಾರ್ಥಿಗಳು ಸಾಧ್ಯವಿರುವ ಅತ್ಯುತ್ತಮ ಶಿಕ್ಷಣದ ಪ್ರಯೋಜನಕ್ಕೆ ಭಾಜನರಾಗುವುದನ್ನು ಖಚಿತಪಡಿಸುವ ನಿಟ್ಟಿನಲ್ಲಿ ಒಂದು ಧನಾತ್ಮಕ ನಡೆಯಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ತನ್ನ ಶೈಕ್ಷಣಿಕ ಚಟುವಟಿಕೆಗಳು ಮತ್ತು ವೇಳಾಪಟ್ಟಿಗಳನ್ನು ಭಾರತೀಯ ಅನುಸಂಧಾನ ಪರಿಷತ್ತಿನ ಮಾರ್ಗಸೂಚಿಗಳೊಂದಿಗೆ ಹೊಂದಿಸಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಕೈಗೊಳ್ಳುತ್ತಿರುವುದನ್ನು ಮನಗಂಡು ಸಂತುಷ್ಟನಾಗಿದ್ದೇನೆ. ಇದು ವಿಕಸನಗೊಳ್ಳುತ್ತಿರುವ ವಿಷಯ ಮತ್ತು ಪಠ್ಯಕ್ರಮಗಳನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ವಿಶ್ವವಿದ್ಯಾನಿಲಯದ ಪೂರ್ವಸಿದ್ಧತೆಯನ್ನು ಎತ್ತಿತೋರುತ್ತದೆ. ತ್ವರಿತವಾಗಿ ಬದಲಾಗುತ್ತಿರುವ ಸಮಾಜದ ಬೇಡಿಕೆಗಳು ಮತ್ತು ಈ ಬೇಡಿಕೆಗಳಿಗೆ ಅನುಗುಣವಾಗಿರುವ ಶಿಕ್ಷಣ ವ್ಯವಸ್ಥೆಗಳ ಅಗತ್ಯಗಳು ನಿಶ್ಚಿತವಾಗಿರುವ ಈ ಸಂದರ್ಭದಲ್ಲಿ ಕೃಷಿ ಶಿಕ್ಷಣದ ಶೈಕ್ಷಣಿಕ ಹಿನ್ನೆಲೆಯಲ್ಲಿನ ಪುನಃರಚನೆಯು ಖಂಡಿತ ಅಗತ್ಯವಿದೆ.

2020ರ ಭಾರತದ ರಾಷ್ಟ್ರೀಯ ಶಿಕ್ಷಣ ನೀತಿ (ಎನ್.ಇ.ಪಿ.–2020)ಯು ಹೊಸ ಅವಕಾಶಗಳಿಗೆ ಮುಕ್ತವಾಗಿದ್ದು ಕೃಷಿ–ಶಿಕ್ಷಣ ವ್ಯವಸ್ಥೆಯಲ್ಲಿ ಅಗತ್ಯ ಬದಲಾವಣೆಗಳ ಪರಿಚಯಕ್ಕೆ ಮಾರ್ಗದರ್ಶಿಯಾಗಿದೆ. ಈ ನೀತಿಯು ಚಿಂತನಶೀಲತೆ, ಸೃಜನಶೀಲತೆ ಮತ್ತು ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯನ್ನು ಉತ್ತೇಜಿಸುತ್ತ ಶಿಕ್ಷಣಕ್ಕೆ ಸಮಗ್ರ ಮತ್ತು ಬಹುಶಿಸ್ತೀಯ ಪ್ರವೇಶವನ್ನು ಒತ್ತಿಹೇಳುತ್ತದೆ.

ಈ ನೀತಿಯು ಶಿಕ್ಷಣವನ್ನು ಬಹುಶಿಸ್ತೀಯವೂ, ಸಂದರ್ಭೋಚಿತವೂ ಮತ್ತು ಸಂಶೋಧನಾ–ಆಧಾರಿತವೂ ಆಗಿರುವಂತೆ ಮಾಡಲು ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಡಿಯಲ್ಲಿ ಉನ್ನತ ಶಿಕ್ಷಣದ ಸುಧಾರಣೆಯನ್ನು ಪ್ರತಿಪಾದಿಸುತ್ತದೆ. ನಿಮ್ಮಲ್ಲಿ ಅನೇಕರಿಗೆ ತಿಳಿದಿರುವಂತೆ, 2020ರ ಎನ್.ಇ.ಪಿ. ಯೂ

ಶಿಕ್ಷಣವನ್ನು ಸುಲಭವಾಗಿ ಪಡೆಯುವಂತಹದ್ದು ಮತ್ತು ಅಂತರ್ಗತವಾಗಿರುವಂತಹದ್ದಾಗಿಸಲು ಆನ್‌ಲೈನ್ ಕಲಿಕೆಯನ್ನೊಳಗೊಂಡಂತೆ ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆಗೆ ಒತ್ತು ನೀಡುತ್ತದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಮುನ್ನೋಟವು ಶೈಕ್ಷಣಿಕ ಸುಧಾರಣೆಗಳಿಗೆ ಸಂಬಂಧಿಸಿದಂತೆ ನಿರ್ಣಾಯಕ ಸಮಸ್ಯೆಗಳಿಗೆ ಪರಿಣಾಮಕಾರಿ ಪರಿಹಾರ ನೀಡುತ್ತದೆ ಮತ್ತು ಅತ್ಯುನ್ನತ ಗುಣಮಟ್ಟದ ಮಾನವ ಸಂಪನ್ಮೂಲಗಳ ಅಭಿವೃದ್ಧಿಗೆ ಗಮನಾರ್ಹ ಕೊಡುಗೆಗಳನ್ನು ನೀಡುತ್ತದೆ ಎಂಬ ವಿಶ್ವಾಸ ನನಗಿದೆ. ಕೃಷಿ ಕ್ಷೇತ್ರ ಎದುರಿಸಬೇಕಾಗಿರುವ ಭವಿಷ್ಯದ ಸವಾಲುಗಳನ್ನು ಮೆಟ್ಟಿನಿಲ್ಲಲು ಗುಣಮಟ್ಟದ ಮಾನವ ಸಂಪನ್ಮೂಲಗಳು ಅತ್ಯಗತ್ಯ.

**ಭಾರತೀಯ ಕೃಷಿಯ ಕ್ಷಿಪ್ರ ಬೆಳವಣಿಗೆ**

ಭಾರತದಲ್ಲಿ, ಕೃಷಿಯು ದೇಶದ ನಾಗರಿಕತೆ, ಸಂಸ್ಕೃತಿ ಮತ್ತು ಪರಂಪರೆಗಳಿಗೆ ಬುನಾದಿಯಾಗಿದೆ. ಭಾರತೀಯ ಕೃಷಿಯು ಹವಾಮಾನ, ಮಣ್ಣಿನ ರಚನೆ ಮತ್ತು ಸಸ್ಯಸಂಪತ್ತಿನಿಂದ ಭಿನ್ನವಾಗುತ್ತ ಹೋಗಿರುವ ವಿಭಿನ್ನ ಪರಿಸರ ವ್ಯವಸ್ಥೆಗಳ ಸಂಕೀರ್ಣ ರಚನೆಯಾಗಿದೆ. ಅರ್ಧದಷ್ಟು ಭಾರತೀಯರು ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಿಂದ ಬದುಕು ಕಟ್ಟಿಕೊಂಡಿದ್ದಾರೆ ಎಂಬುದು ನಿಮಗೆ ತಿಳಿದಿರುವ ವಿಷಯವೇ ಆಗಿದೆ.

1947ರ ಸ್ವಾತಂತ್ರ್ಯದ ನಂತರ, ಭಾರತೀಯ ಕೃಷಿ ಅನುಸಂಧಾನ ಪರಿಷತ್ತು– ಕೃಷಿ ಸಂಶೋಧನೆ, ಶಿಕ್ಷಣ ಮತ್ತು ವಿಸ್ತರಣೆಗೆ ನಾಂದಿ ಹಾಡಿತು. ಸ್ವಾತಂತ್ರೋತ್ತರದ ಆರಂಭಿಕ ಸಂವತ್ಸರಗಳಲ್ಲಿ, ಕಳಪೆ ಉತ್ಪಾದಕತೆ ಮತ್ತು ಹೆಚ್ಚುತ್ತಿರುವ ಜನಸಂಖ್ಯೆಯು ನಮ್ಮನ್ನು ಆಹಾರ ಧಾನ್ಯಗಳ ಆಮದಿನ ಮೇಲೆ ಅವಲಂಬಿತರಾಗುವಂತೆ ಮಾಡಿತ್ತು. ಅಮೇರಿಕಾ ಸಂಯುಕ್ತ ಸಂಸ್ಥಾನವು ತನ್ನ 480ನೇ ಸಾರ್ವಜನಿಕ ಕಾನೂನು (ಪಿ.ಎಲ್.480) ಯೋಜನೆಯ ಮೂಲಕ 1960ರ ದಶಕದ ಆರಂಭದಲ್ಲಿ ಭಾರತಕ್ಕೆ ನೆರವನ್ನು ನೀಡಿತು. ಈ ಪರಿಸ್ಥಿತಿಯನ್ನು ಬಹುವಾಗಿ 'ಬಾಯಿಗೆ ನಾವೆ' (ಶಿಪ್ ಟು ಮೌಥ್) ಅಸ್ತಿತ್ವ ಎಂದೇ ಕರೆಯಲಾಗುತ್ತಿತ್ತು.

ಹವಾಮಾನದ ಅನಿಶ್ಚಿತತೆಗಳು, ಕ್ಷೀಣಿಸುತ್ತಿರುವ ಮಣ್ಣಿನ ಆರೋಗ್ಯ, ಬರಿದಾಗುತ್ತಿರುವ ಜಲಸಂಪನ್ಮೂಲಗಳು ಹಾಗೂ ಅಪಾಯಕಾರಿ ಕೀಟಗಳು ಮತ್ತು ರೋಗಕಾರಕಗಳು ಎಡಪಡೆಯುವಂತಹ ಹಲವಾರು ಸೀಮಿತಗೊಳಿಸುವ ಅಂಶಗಳ ಹೊರತಾಗಿಯೂ ಭಾರತೀಯ ಕೃಷಿಯ ಬೆಳವಣಿಗೆಯು ಸಾಕಷ್ಟು ಪ್ರಭಾವಶಾಲಿಯಾಗಿದೆ. ನಾವು, ನಮ್ಮ ನಿರಂತರ ಕೃಷಿ ಸಂಶೋಧನೆಯ ಮೂಲಕ, 75 ವರ್ಷಗಳಲ್ಲಿ ಭಾರತವನ್ನು ಸ್ವಾವಲಂಬಿ ಮತ್ತು ಆಹಾರವನ್ನು ರಫ್ತು ಮಾಡುವ ರಾಷ್ಟ್ರವನ್ನಾಗಿ ಪರಿವರ್ತಿಸಿದ್ದೇವೆ.

ಅಜೀವಕ ಮತ್ತು ಜೈವಿಕ ಒತ್ತಡಗಳು ಮತ್ತು ಹದಗೆಡುತ್ತಿರುವ ನೈಸರ್ಗಿಕ ಸಂಪನ್ಮೂಲಗಳ ಹೊರತಾಗಿಯೂ ನಮ್ಮ ಸಂಶೋಧನಾ ಕ್ಷೇತ್ರದಲ್ಲಿನ ಪ್ರಯತ್ನಗಳು ಕೃಷಿ ಉತ್ಪಾದನೆಯಲ್ಲಿ 1950–51ರಲ್ಲಿದ್ದ 135 ಮಿಲಿಯನ್ ಟನ್‌ಗಳ ಉತ್ಪಾದನೆಯನ್ನು 342 ಮಿಲಿಯನ್ ಟನ್‌ಗಳಿಗೆ ಎತ್ತರಿಸಿರುವುದಕ್ಕೆ ಸಾಧ್ಯವಾಗಿಸಿವೆ.

ಜಾಗತೀಕವಾಗಿ ಭಾರತವು ಹಾಲು, ಬೇಳೆಕಾಳು ಮತ್ತು ಸೆಣಬಿನ ಅತಿದೊಡ್ಡ ಉತ್ಪಾದನೆಯ ದೇಶವಾಗಿದೆ ಮತ್ತು ಅಕ್ಕಿ, ಗೋಧಿ, ಕಬ್ಬು, ಕಡಲೆಕಾಯಿ, ತರಕಾರಿಗಳು, ಹಣ್ಣುಗಳು ಮತ್ತು ಹತ್ತಿ ಉತ್ಪಾದನೆಯಲ್ಲಿ ಎರಡನೇ ಅತಿದೊಡ್ಡ ಉತ್ಪಾದಕ ದೇಶವಾಗಿದೆ. ಅಷ್ಟೇ ಅಲ್ಲದೆ ಮಸಾಲೆ ಪದಾರ್ಥ, ಮೀನು, ಕೋಳಿ, ಜಾನುವಾರು ಮತ್ತು ತೋಟದ ಬೆಳೆಗಳ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ದೇಶವೂ ಸಹ ಆಗಿದೆ. ಭಾರತದಲ್ಲಿನ ಕೃಷಿ ಸಂಶೋಧನೆಗಳು ಮತ್ತು ಸಾಧನೆಗಳು ಜಾಗತಿಕ ಮೆಚ್ಚುಗೆಗೆ ಪಾತ್ರವಾಗಿದೆ.

2047ರ ಹೊತ್ತಿಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ದೂರದೃಷ್ಟಿಯಿಂದ ನಾವೀಗ ಕೆಲಸ ಮಾಡುತ್ತಿದ್ದೇವೆ. ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಯು ಭವಿಷ್ಯದಲ್ಲಿ ಎದುರಿಸಬೇಕಾದ ಪ್ರಮುಖ ಸವಾಲುಗಳಲ್ಲಿ ಒಂದಾಗಿದೆ. 2047ರ ಹೊತ್ತಿಗೆ ನಾವು ಕನಿಷ್ಠ ಉದ್ಯೋಗ ಖಾತ್ರಿಯೊಂದಿಗೆ 400 ಮಿಲಿಯನ್ ಟನ್‌ಗಳಿಗಿಂತಲೂ ಹೆಚ್ಚಿನ ಆಹಾರ ಧಾನ್ಯಗಳನ್ನು ಉತ್ಪಾದಿಸಬೇಕಾಗಬಹುದು.

ಕೃಷಿ ಬೇಡಿಕೆಗಳನ್ನು ಪೂರೈಸುವುದರ ಜೊತೆಗೆ ರೈತರ ಆದಾಯವನ್ನು ದ್ವಿಗುಣಗೊಳಿಸುವತ್ತ ಹೆಚ್ಚಿನ ಗಮನ ಕೇಂದ್ರಿಕರಿಸುವುದರೊಂದಿಗೆ ಕೃಷಿಯ ಚಿತ್ರಣವು ವೇಗವಾಗಿ ವಿಕಸನಗೊಳ್ಳುತ್ತಿದೆ. ಸೀಮಿತ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಮತ್ತು ಕ್ಷಿಪ್ರವಾಗಿ ಬದಲಾಗುತ್ತಿರುವ ಭಾರತದ ಜನರ ಜೀವನ ಶೈಲಿಯನ್ನು ಅನುಸರಿಸುತ್ತ ಬೆಳೆಯುತ್ತಿರುವ ಜನಸಂಖ್ಯೆಯುನ್ನು ಪೋಷಿಸುವುದು ನಮ್ಮ ಮೇಲಿನ ಜವಾಬ್ದಾರಿಯಾಗಿದೆ.

**ಮುಂದೆ ಏನು? – ಆಧುನಿಕ ಹಂತದ ಕೃಷಿ**

***ಆಹಾರ ಉತ್ಪಾದನೆಯತ್ತ ಗಮನ***

ಸುಮಾರು 1.40 ಶತಕೋಟಿಗಿಂತಲೂ ಹೆಚ್ಚು ಜನಸಂಖ್ಯೆಯುಳ್ಳ ಭಾರತ ದೇಶವು 328 ಮಿ. ಹೆಕ್ಟೇರ್ ವಿಸ್ತೀರ್ಣದೊಂದಿಗೆ ಭೌಗೋಳಿಕವಾಗಿ ವಿಶ್ವದ 7ನೇ ಅತಿದೊಡ್ಡ ದೇಶವಾಗಿದೆ. ಭಾರತದಲ್ಲಿ ಸುಮಾರು 160 ಮಿ. ಹೆಕ್ಟೇರ್ ಕೃಷಿ ಯೋಗ್ಯ ಭೂಮಿ ಇದ್ದು ಭೂಮಿಯ ಮೇಲಿರುವ 60 ಭಿನ್ನ ಭಿನ್ನ ಮಣ್ಣಿನ ವಿಧಗಳ ಪೈಕಿ 46 ವಿಧಗಳನ್ನು ಹೊಂದಿರುವುದಲ್ಲದೆ 15 ಪ್ರಮುಖ ಹವಾಮಾನ ಪ್ರಕಾರಗಳನ್ನು ಆಧರಿಸಿ ಸಾಗುತ್ತದೆ.

ಭಾರತದ ಒಟ್ಟು ಭೌಗೋಳಿಕ ಪ್ರದೇಶದ ಸುಮಾರು ಶೇ. 50ರಷ್ಟು ಭೂಮಿ ಕೃಷಿಗೆ ಒಳಪಟ್ಟಿದ್ದು, ಇದು ಕೃಷಿಭೂಮಿ ಬಳಕೆದಾರರ ಪಟ್ಟಿಯಲ್ಲಿ ಭಾರತವನ್ನು ಅಗ್ರಸ್ಥಾನದಲ್ಲಿ ಇರಿಸಿದೆ. ಭಾರತದ ಮೊದಲ ಪ್ರಧಾನಮಂತ್ರಿ ಪಂಡಿತ್ ಜವಾಹರಲಾಲ್ ನೆಹರು ಅವರು ಹೇಳಿದ ಮಾತು 'ಬೇರೆಲ್ಲವೂ ಕಾಯಬಹುದು, ಆದರೆ ಕೃಷಿ ಅಲ್ಲ' ಭಾರತೀಯ ಕೃಷಿಯ ಮಹತ್ವವನ್ನು ಸಾರಿ ಹೇಳುತ್ತದೆ.

ನೀತಿ ಆಯೋಗದ ಬೆಂಬಲದೊಂದಿಗೆ, ನೈಸರ್ಗಿಕ ಮತ್ತು ಜೈವಿಕ ಸಂಪನ್ಮೂಲಗಳನ್ನು ಬಳಸುವುದರಲ್ಲಿ ಜಾಗರೂಕತೆವಹಿಸಿ ನವೀನ ಕೃಷಿ ಪದ್ದತಿಗಳನ್ನು ಅಳವಡಿಸಿಕೊಳ್ಳುವ ಅವಶ್ಯಕತೆ ನಮಗಿದೆ. ಪ್ರಪಂಚದ ಎಂಟು ಬೆಳೆ ಸಸ್ಯಗಳ ಉಗಮ ಕೇಂದ್ರಗಳಲ್ಲಿ ಭಾರತದ ಭೂಪ್ರದೇಶವು ಒಂದಾಗಿದೆ. ಭಾರತದಲ್ಲಿ ಅನೇಕ ಬೆಳೆಗಳು ಉಗಮವಾಗಿದೆ. ಉದಾಹರಣೆಗೆ, 166 ಬೆಳೆ ಪ್ರಭೇದಗಳು ಮತ್ತವುಗಳ 320 ಕಾಡು ಜಾತಿಗಳು ಉಗಮಿಸಿದ್ದು ಇಲ್ಲಿಯೆ. ಪ್ರತಿ ಪ್ರಬೇಧದೊಳಗಿನ ಅನುವಂಶಿಕ ವೈವಿಧ್ಯತೆಯು ಸಹ ಬೆಳೆ ಸುಧಾರಣೆಯಲ್ಲಿ ಶ್ರೀಮಂತ ಜೈವಿಕ ಸಂಪನ್ಮೂಲವಾಗಿ ಕೆಲಸ ಮಾಡುತ್ತಿದೆ.

ಉದಾಹರಣೆಯಾಗಿ ಭತ್ತದ ಬೆಳೆಯೊಂದನ್ನೆ ತೆಗೆದುಕೊಂಡರೆ ಅದು ಸರಿಸುಮಾರು 50,000 ವಿಭಿನ್ನ ಪ್ರಭೇದಗಳಾಗಿ ವಿಕಸನಗೊಂಡಿದೆ ಹಾಗೆಯೇ ಮಾವಿನ ಬೆಳೆಯು 1,000ಕ್ಕೂ ಹೆಚ್ಚು ಪ್ರಭೇದಗಳಾಗಿ ಹಂಚಿಹೋಗಿದೆ. ಇಂತಹ ವೈವಿಧ್ಯಮಯ ಸಂಪನ್ಮೂಲಗಳನ್ನು ಬಳಸಿಕೊಂಡು, ಹೊಸ ಬೆಳೆ ಪ್ರಕಾರಗಳನ್ನು ವಿಕಸನಗೊಳಿಸುವುದು ಮತ್ತು ಭಾರತೀಯ ಕೃಷಿಯನ್ನು ಪರಿವರ್ತಿಸುವುದು ಸಾಧ್ಯವಿದೆ.

ಭಾರತೀಯ ಕೃಷಿಯನ್ನು ಪರಿವರ್ತಿಸಲು ಸ್ವಾತಂತ್ರ್ಯೋತ್ತರದ ಕೃಷಿ–ಸಂಶೋಧನೆಯಿಂದ ಸಾಧಿತವಾದ ಜ್ಞಾನವನ್ನು ಸಂಗ್ರಹಿಸಿ, ವಿಶ್ಲೇಷಿಸಿ, ಬಳಸಿಕೊಳ್ಳುವ ಅವಶ್ಯಕತೆ ನಮಗಿದೆ. ಈ ವಿಶ್ವವಿದ್ಯಾನಿಲಯದಲ್ಲಿನ ನೀವು ಅಧ್ಯಯನ ಕೈಗೊಂಡ ವಿಷಯಗಳನ್ವಯ ನಿಮಗರಿವಿರುವಂತೆ ಅರೆ–ಕುಬ್ಜ, ಬೆಳಕಿನ–ಸಂವೇದನೆಯಿಲ್ಲದ, ಉಪಚಾರಾನ್ವಯ ಪ್ರತಿಕ್ರಿಯಾತ್ಮಕತೆಯುಳ್ಳ ಮತ್ತು ಹೆಚ್ಚು ಇಳುವರಿ ನೀಡುವ ಗೋಧಿ ಮತ್ತು ಅಕ್ಕಿಯ ಪರಿಚಯ, ಅಭಿವೃದ್ಧಿ ಮತ್ತು ವ್ಯಾಪಕ ಅಳವಡಿಕೆಯು ಭಾರತೀಯ ಆಹಾರ ಭದ್ರತೆ ಮತ್ತು ಕೃಷಿ ಆರ್ಥಿಕತೆಯಲ್ಲಿ ಪರಿವರ್ತನೆಯನ್ನು ತಂದಿದೆ.

ಈ ತಂತ್ರಜ್ಞಾನವು ಹಸಿರು ಕ್ರಾಂತಿಗೆ ನಾಂದಿಯಾಗಿದೆ. ಆದಾಗ್ಯೂ, ಪರಿಸ್ಥಿತಿಗಳು ವೇಗವಾಗಿ ಬದಲಾಗುತ್ತಿದ್ದು, ಅನೇಕ ಹೊಸಹೊಸ ಸವಾಲುಗಳು ಹೊರಹೊಮ್ಮುತ್ತಿವೆ. ಆಹಾರಕ್ಕಾಗಿ ನಿರಂತರವಾಗಿ ತೀವ್ರಗೊಳ್ಳುತ್ತಿರುವ ಒತ್ತಡದ ನಡುವೆ, ನೈಸರ್ಗಿಕ ಸಂಪನ್ಮೂಲಗಳ ಪ್ರಮಾಣವು ವೇಗವಾಗಿ ಕುಗ್ಗುತ್ತಾ ಕುಸಿಯುತ್ತಿದ್ದು, ಚಿಂತಾಜನಕ ಮಟ್ಟವನ್ನು ತಲುಪುತ್ತಿವೆ. ಜಾಗತಿಕ ಹವಾಮಾನ ವೈಪರಿತ್ಯವು ಬೆಳೆಗಳು, ಮಣ್ಣು, ನೀರು ಮತ್ತು ಜೀವ ವೈವಿಧ್ಯತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದ್ದು,

ಸಂಪನ್ಮೂಲಗಳ ಕೊರತೆಯನ್ನು ಉಲ್ಬಣಗೊಳಿಸುತ್ತಿದೆ. ಆಹಾರ ಭದ್ರತೆಯನ್ನು ಕಾಪಾಡಿಕೊಳ್ಳುವ ದಿಸೆಯಲ್ಲಿ ನಾವು ನವೀನ ವಿಧಾನಗಳನ್ನು ಮತ್ತು ತಂತ್ರಜ್ಞಾನಗಳನ್ನು ಅರಸಬೇಕಾಗಿದೆ.

***ಪೌಷ್ಟಿಕತೆಯೆಡೆಗೆ ಗಮನ***

ಆಹಾರ ಉತ್ಪಾದನೆಯನ್ನು ವಿಸ್ತರಿಸಲು ಮತ್ತು ಅಧಿಕ ಪ್ರಮಾಣದ ಆಹಾರ ಧಾನ್ಯಗಳ ಸುರಕ್ಷತಾ ದಾಸ್ತಾನುಗಳನ್ನು ನಿರ್ಮಿಸುವಲ್ಲಿ ಭಾರತವು ಉತ್ತಮ ಕೆಲಸವನ್ನೇ ಮಾಡಿದೆ. ನಾವು ನಿವ್ವಳ ಆಹಾರ ರಫ್ತುದಾರರಾಗಿದ್ದು, ವಿಶ್ವದ ಒಂಬತ್ತನೇ ಅತಿದೊಡ್ಡ ಕೃಷಿ ಉತ್ಪನ್ನಗಳ ರಫ್ತುದಾರರಾಗಿದ್ದೇವೆ. ಕಳೆದ 30 ವರ್ಷಗಳಲ್ಲಿ, ಆಹಾರ ಧಾನ್ಯದ ಕೊರತೆಯುಳ್ಳ ರಾಷ್ಟ್ರ ಎಂಬ ಮಟ್ಟದಿಂದ ಅಧಿಕ ಆಹಾರ-ಧಾನ್ಯ ಉತ್ಪಾದಕ ಸ್ವಾವಲಂಭಿ ರಾಷ್ಟ್ರವಾಗಿ ಪರಿವರ್ತನೆಗೊಳ್ಳುವ ಮಟ್ಟಕ್ಕೆ ನಮ್ಮ ಸಂಶೋಧನೆ ಹಾಗೂ ರೈತರಿಂದ ಸಂಶೋಧನಾ ಉತ್ಪನ್ನಗಳ ಸ್ವೀಕೃತಿಯು ಸಹಾಯ ಮಾಡಿದೆ.

ಆದಾಗ್ಯೂ, ನಾವು ಪೌಷ್ಟಿಕಾಂಶಗಳಿಂದ ಸಮೃದ್ಧ ಆಹಾರ ಧಾನ್ಯಗಳನ್ನು ಉತ್ಪಾದಿಸಬೇಕಾಗಿದೆ. ನಾವು ಈಗ ಅಪೌಷ್ಟಿಕತೆಯ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಪೌಷ್ಟಿಕತೆ ಕೊರತೆಯಿಂದ ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರು ಅನಾನುಕೂಲತೆಗೆ ಒಳಗಾಗಿದ್ದಾರೆ ಮತ್ತು ಒಟ್ಟು ಜನಸಂಖ್ಯೆಯ ಶೇ. 15ಕ್ಕಿಂತ ಹೆಚ್ಚು ಜನರು ಇನ್ನೂ ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ.

ಕಳಪೆ ಪೌಷ್ಟಿಕತೆಯ ಸಮಸ್ಯೆಯನ್ನು ಪರಿಹರಿಸಲು ಭಾರತ ಸರ್ಕಾರವು ಹಲವು ರೀತಿಯಲ್ಲಿ ಶ್ರಮಿಸುತ್ತಿದೆ. ಪೋಷಣೆ ಅಭಿಯಾನದ (ಪೌಷ್ಟಿಕಾಂಶ ಯೋಜನೆ) ಪ್ರಾರಂಭವು ಪೌಷ್ಟಿಕತೆಯ ಕುರಿತ ರಾಷ್ಟ್ರೀಯ ಕಾರ್ಯಸೂಚಿಯನ್ನು ಕೇಂದ್ರೀಕರಿಸಿದೆ. ಪೋಷಣ್ ಅಭಿಯಾನ್ ಜನ್ ಆಂದೋಲನ್ (ಪೋಷಣೆ ಪರ ಜನಾಂಧೋಲನ)ವು ಪೌಷ್ಟಿಕಾಂಶ ಕುರಿತಾದ ನಿಯಮಿತ ಮಾಸಿಕ ಸಮೂಹ ಸಂವಹನವು ಮತ್ತಷ್ಟು ತೀವ್ರವಾಗಿದೆ.

ವಿಶ್ವಸಂಸ್ಥೆಯು 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್.ಡಿ.ಜಿ.ಗಳು) ನಿಗದಿಪಡಿಸಿದ್ದು, 17ರಲ್ಲಿ 12 ಗುರಿ ಸೂಚಕಗಳು ಪೌಷ್ಟಿಕಾಂಶಕ್ಕೆ ಸಂಬಂಧಿಸಿವೆ. ಆದಾಗ್ಯೂ, ಭಾರತದಲ್ಲಿ, ವಿವಿಧ ಪ್ರದೇಶಗಳು ಮತ್ತು ಸಾಮಾಜಿಕ ಗುಂಪುಗಳಾದ್ಯಂತ ಆದಾಯ ಮಟ್ಟಗಳು, ಶಿಕ್ಷಣ, ಆರೋಗ್ಯ ಮತ್ತು ಮೂಲಸೌಕರ್ಯಗಳಲ್ಲಿನ ವ್ಯತ್ಯಾಸಗಳಂತಹ ಸಾಮಾಜಿಕ-ಆರ್ಥಿಕ ಸಮಸ್ಯೆಗಳ ಕಾರಣದಿಂದಾಗಿ ಪೌಷ್ಟಿಕಾಂಶದ ಬೇಡಿಕೆಯನ್ನು ಪೂರೈಸುವುದು ಒಂದು ಪ್ರಮುಖ ಸವಾಲಾಗಿದೆ. ಜೈವಿಕ ಬಲವರ್ಧನೆಯು ಈ ಸಮಯದ ಅಗತ್ಯವಾಗಿದೆ ಎಂದು ನಾನು ಭಾವಿಸುತ್ತೇನೆ. ನಿಮ್ಮಂತಹ ಕೃಷಿ-ಸಂಶೋಧಕರು ಮತ್ತು ಪದವೀಧರರು ಈ ಕ್ಷೇತ್ರದಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ.

ಭಾರತದಲ್ಲಿ, 12ನೇ ಯೋಜನೆಯಲ್ಲಿ ಜೈವಿಕ ಬಲವರ್ಧನೆಯ ಕುರಿತಾದ ಕನ್ಸೋರ್ಷಿಯಂ ಸಂಶೋಧನಾ ವೇದಿಕೆಯಲ್ಲಿ ವಿಶೇಷ ಯೋಜನೆಯನ್ನು ಪ್ರಾರಂಭಿಸುವುದರೊಂದಿಗೆ ವಿಶೇಷ ಪ್ರಯತ್ನಗಳಿಗೆ ಚಾಲನೆ ನೀಡಲಾಗಿದೆ. ಸಂಘಟಿತ ಪ್ರಯತ್ನಗಳು ಭತ್ತ, ಗೋಧಿ, ಮೆಕ್ಕೆಜೋಳ, ಸಜ್ಜೆ, ರಾಗಿ ಮುಂತಾದ ವಿವಿಧ ಬೆಳೆಗಳಲ್ಲಿ 85ಕ್ಕೂ ಹೆಚ್ಚು ವಿಧದ ಬೆಳೆ ಪ್ರಭೇದಗಳ ಅಭಿವೃದ್ಧಿಗೆ ಕಾರಣವಾಗಿವೆ.

ಈ ಜೈವಿಕ ಬಲವರ್ಧಿತ ತಳಿಗಳನ್ನು ಜನಪ್ರಿಯಗೊಳಿಸಲು ವಿಶೇಷ ಪ್ರಯತ್ನಗಳನ್ನು ಮಾಡಲಾಗುತ್ತಿದೆ ಮತ್ತು ಜೈವಿಕ ಬಲವರ್ಧಿತ ತಳಿಗಳ ಗುಣಮಟ್ಟದ ಬೀಜಗಳನ್ನು ಉತ್ಪಾದಿಸಿ ವಾಣಿಜ್ಯ ಕೃಷಿಗೆ ಲಭ್ಯವಾಗುವಂತೆ ಮಾಡಲಾಗುತ್ತಿದೆ ಎಂಬುದನ್ನು ತಿಳಿಸಲು ನನಗೆ ಸಂತೋಷವೆನಿಸುತ್ತದೆ.

ಉದಾಹರಣೆಗೆ, ಐ.ಸಿ.ಎ.ಆರ್. ತನ್ನ ಕೃಷಿ ವಿಜ್ಞಾನ ಕೇಂದ್ರಗಳ (ಕೆ.ವಿ.ಕೆ.ಗಳು) ಮೂಲಕ ಜೈವಿಕ ಬಲವರ್ಧಿತ ಪ್ರಭೇದಗಳ ಹೆಚ್ಚಳಕ್ಕೆ ವಿಶೇಷ ಕಾರ್ಯಕ್ರಮಗಳಾದ ಪೌಷ್ಠಿಕಾಂಶ-ಸೂಕ್ಷ್ಮ ಕೃಷಿ ಸಂಪನ್ಮೂಲಗಳು ಮತ್ತು ಆವಿಷ್ಕಾರಗಳು (ಎನ್.ಎ.ಆರ್.ಐ) ಮತ್ತು ಕೃಷಿಯಲ್ಲಿನ ಮೌಲ್ಯವರ್ಧನೆ ಮತ್ತು ತಂತ್ರಜ್ಞಾನ ಪೋಷಣಾ ಕೇಂದ್ರ (ವಿ.ಎ.ಟಿ.ಸಿ.ಎ.)ಗಳನ್ನು ಪ್ರಾರಂಭಿಸಿವೆ.

### *ರೈತರ ಆದಾಯದೆಡೆಗೆ ಗಮನ*

ದೇಶದ ಒಟ್ಟು ಜನಸಂಖ್ಯೆಯ ಅರ್ಧಕ್ಕಿಂತಲೂ ಹೆಚ್ಚು ಜನರ ಜೀವನವು ಕೃಷಿ ಆಧಾರಿತವಾಗಿರುವುದರಿಂದ ಭಾರತ ಸರ್ಕಾರವು ರೈತರ ಆದಾಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ನೀತಿ ಆಯೋಗದ ಆರ್ಥಿಕ ಚಿಂತಕರ ಚಾವಡಿಯು ನಮ್ಮ ರೈತರ ಆದಾಯವನ್ನು ದ್ವಿಗುಣಗೊಳಿಸಲು ನಾಲ್ಕು ಅಂಶಗಳ ಕ್ರಿಯಾಯೋಜನೆಯನ್ನು ಮುಂದಿಟ್ಟಿದೆ. ರೈತರ ಆದಾಯವನ್ನು ಹೆಚ್ಚಿಸಲು, ಸರ್ಕಾರವು ಹಲವಾರು ಗಮನಿತ ಕ್ಷೇತ್ರಗಳಲ್ಲಿ ನವೀನ ಕ್ರಮಗಳನ್ನು ಕೈಗೊಂಡಿದೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ (ಪಿ.ಎಂ.-ಕಿಸಾನ್) ಯೋಜನೆ, ಬೆಳೆ ವಿಮೆ, ನೀರಾವರಿ ಸೌಲಭ್ಯಗಳು ಮತ್ತು ಸಾಂಸ್ಥಿಕ ಸಾಲಕ್ಕೆ ಪ್ರವೇಶಿಕೆ ನೀಡುವ ಮೂಲಕ ರೈತರಿಗೆ ಆದಾಯದ ಬೆಂಬಲವನ್ನು ಒದಗಿಸಲಾಗಿದೆ ಮತ್ತು ವಿವಿಧ ಹಿಂಗಾರು ಮತ್ತು ಮುಂಗಾರು ಬೆಳೆಯುವ ರೈತರಿಗೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂ.ಎಸ್.ಪಿ.) ಖಾತ್ರಿಗೊಳಿಸಲಾಗಿದೆ ಅಲ್ಲದೆ ದೃಢವಾದ ಸಂಗ್ರಹಣೆ ಕಾರ್ಯವಿಧಾನವನ್ನು ಸರಿಯಾಗಿ ನಿರ್ವಹಿಸಲಾಗುತ್ತಿದೆ. ದೇಶಾದ್ಯಂತ 3.25 ಲಕ್ಷಕ್ಕೂ ಹೆಚ್ಚು ರಸಗೊಬ್ಬರ ಸರಬರಾಜು ಕೇಂದ್ರಗಳನ್ನು ಪ್ರಧಾನಮಂತ್ರಿ ಕಿಸಾನ್ ಸಮೃದ್ಧಿ ಕೇಂದ್ರಗಳನ್ನಾಗಿ ಪರಿವರ್ತಿಸುವ ಯೋಜನೆಯನ್ನು ಸರ್ಕಾರ ಘೋಷಿಸಿದೆ.

ವಿವಿಧ ಮೂಲಗಳು ಮತ್ತು ಚಟುವಟಿಕೆಗಳ ಮೂಲಕ ರೈತರ ಆದಾಯವನ್ನು ಹೆಚ್ಚಿಸಬಹುದು. ಇವುಗಳಲ್ಲಿ ಬೆಳೆ ಉತ್ಪಾದಕತೆಯನ್ನು ಹೆಚ್ಚಿಸುವುದು, ಜಾನುವಾರು ಸಾಕಾಣಿಕೆಯನ್ನು ಸುಧಾರಿಸುವುದು, ಒದಗಿಸಲಾದ ಕೃಷಿ ಪರಿಕರಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸುವುದು, ಬೆಳೆ ತೀವ್ರತೆಯನ್ನು ಹೆಚ್ಚಿಸುವುದು, ಅಧಿಕ ಮೌಲ್ಯದ ಉತ್ಪನ್ನಗಳ ಕಡೆಗೆ ಗಮನಹರಿಸುವುದು, ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಗಳನ್ನು ಪಡೆಯುವುದು ಮತ್ತು ಹೆಚ್ಚುವರಿ ಕಾರ್ಮಿಕರನ್ನು ಅನುತ್ಪಾದಕ ಕೃಷಿ ಚಟುವಟಿಕೆಗಳಿಂದ ದೂರವಿಡುವುದು ಸೇರಿವೆ. ಇವುಗಳಲ್ಲಿ ಕೆಲವು ಉಪಕ್ರಮಗಳನ್ನು ಯಶಸ್ವಿಯಾಗಿಸಲು ಸರ್ಕಾರದ ಬೆಂಬಲ, ತಂತ್ರಜ್ಞಾನದ ಅಭಿವೃದ್ಧಿ ಮತ್ತು ಪ್ರಸಾರದ ಬೆಂಬಲ ಬೇಕಾಗಬಹುದು.

ಅಂತಿಮವಾಗಿ, ಎಲ್ಲಾ ಹೂಡಿಕೆದಾರರು ವ್ಯಾಪಕ ಮತ್ತು ಬಹುಮುಖಿ ವಿಧಾನವನ್ನು ಅಳವಡಿಸಿಕೊಂಡರೆ ಕಡಿಮೆ ಅವಧಿಯಲ್ಲಿ ರೈತರ ಆದಾಯವನ್ನು ದ್ವಿಗುಣಗೊಳಿಸುವುದು ಸಾಧ್ಯವಿದೆ. ಈ ವಿಧಾನವು ಆದಾಯದ ಅವಕಾಶಗಳನ್ನು ಸೃಷ್ಟಿಸುವುದರೆಡೆಗೆ ಮತ್ತು ಈ ಗುರಿಯನ್ನು ಸಾಧಿಸಲು ಅಗತ್ಯವಾದ ಸಕ್ರಿಯ ಪರಿಸ್ಥಿತಿಗಳನ್ನು ನಿಭಾಯಿಸುವುದರೆಡೆಗೆ ಗಮನಹರಿಸಬೇಕು. ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ಮತ್ತು ಮೂಲಸೌಕರ್ಯ ಹಾಗೂ ಸಂಸ್ಥೆಗಳು ಮತ್ತು ಮಾನವ ಸಂಪನ್ಮೂಲಗಳ ಅಭಿವೃದ್ಧಿಯ ಮೇಲೆ ಹೂಡಿಕೆಗಳನ್ನು ಮಾಡಬೇಕು. ಇದು ಲಾಭದಾಯಕ ಕೃಷಿಗೆ ಪರೋಕ್ಷವಾಗಿ ಕೊಡುಗೆಯನ್ನು ನೀಡುತ್ತದೆ.

### *ಭವಿಷ್ಯದ ಕೃಷಿ ಅನುಲಕ್ಷಿತ ಬಹುಶಿಸ್ತೀಯ ತಂತ್ರಜ್ಞಾನಗಳತ್ತ ಗಮನ*

ಕೃಷಿ ವಿಜ್ಞಾನ ಕ್ಷೇತ್ರವು ನಿರಂತರವಾಗಿ ವಿಕಸನಗೊಳ್ಳುತ್ತಿದ್ದು, ಹೊಸ ಪ್ರವೃತ್ತಿಗಳು ತ್ವರಿತಗತಿಯಲ್ಲಿ ಹೊರಹೊಮ್ಮುತ್ತಿವೆ. ಇತ್ತೀಚಿನ ಸಂಶೋಧನೆ ಮತ್ತು ಪ್ರವೃತ್ತಿಗಳ ಕುರಿತಾದ ವಿದ್ಯಮಾನಗಳನ್ನು ತಿಳಿದುಕೊಳ್ಳಲು ಪ್ರಚಲಿತ ಸಾಹಿತ್ಯವನ್ನು ನಿಯಮಿತವಾಗಿ ಓದುವುದು ಅವಶ್ಯಕವಾಗಿದೆ. ಕೃಷಿ ಸಂಶೋಧನೆ ಮತ್ತು ತಂತ್ರಜ್ಞಾನದ ಅಭಿವೃದ್ಧಿಯಲ್ಲಿನ ಇತ್ತೀಚಿನ ಬೆಳವಣಿಗೆಗಳು ಉಲ್ಲೇಖಾನರ್ಹವಾಗಿವೆ. ಅವು ಈ ಮುಂದಿನಂತಿವೆ.

### ಬೆಳೆ ಉತ್ಪಾದನೆ

***ನಿಖರ ಕೃಷಿ:*** ಬೆಳೆ ಇಳುವರಿ, ಸಂಪನ್ಮೂಲ ಬಳಕೆ ಹಾಗೂ ಕೀಟ ಮತ್ತು ರೋಗ ನಿರ್ವಹಣೆ ಸೇರಿದಂತೆ ಕೃಷಿಯ ವಿವಿಧ ಆಯಾಮಗಳನ್ನು ಉತ್ಕೃಷ್ಟಗೊಳಿಸಲು ತಂತ್ರಜ್ಞಾನ, ದತ್ತಾಂಶ ವಿಶ್ಲೇಷಣೆ ಮತ್ತು ಸಂವೇದಕಗಳ ಸಂಶ್ಲೇಷಣೆಯನ್ನು ಇದು ಒಳಗೊಂಡಿದೆ.

***ವಿದ್ಯುನ್ಮಾನ ಕೃಷಿ:*** ಕೃಷಿ ಚಟುವಟಿಕೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಪರಿವೀಕ್ಷಿಸಲು ಮತ್ತು ನಿರ್ವಹಿಸಲು ಕೃಷಿ ನಿರ್ವಹಣಾ ತಂತ್ರಾಂಶ (ಸಾಫ್ಟ್‌ವೇರ್), ಡ್ರೋನ್‌ಗಳು

ಮತ್ತು ಇಂಟರ್ನೆಟ್ ಆಫ್ ಥಿಂಗ್ಸ್ (ಐ.ಓ.ಟಿ.) ಸಾಧನಗಳು ಸೇರಿದಂತೆ ವಿದ್ಯುನ್ಮಾನ ತಂತ್ರಜ್ಞಾನಗಳನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳುವುದನ್ನು ಒಳಗೊಂಡಿದೆ.

***ಲಂಬ ಕೃಷಿ ಮತ್ತು ಒಳಾಂಗಣ ಕೃಷಿ:*** ನಿಯಂತ್ರಿತ ಒಳಾಂಗಣ ಪರಿಸರದಲ್ಲಿ ಬೆಳೆಗಳನ್ನು ಬೆಳೆಯಲು, ಇರುವ ಜಾಗವನ್ನು ಗರಿಷ್ಠ ಬಳಕೆ ಮಾಡಲು ಮತ್ತು ಸಾಂಪ್ರದಾಯಿಕ ಕೃಷಿ ಭೂಮಿಯ ಅಗತ್ಯತೆ ಮತ್ತದರ ಮೇಲಿನ ಹೊರೆ ಕಡಿಮೆ ಮಾಡಲು ಲಂಬ ಕೃಷಿ ಮತ್ತು ಜಲ ಕೃಷಿ ವ್ಯವಸ್ಥೆಗಳಂತಹ ನವೀನ ವಿಧಾನಗಳ ಅನ್ವೇಷಣೆಯನ್ನು ಒಳಗೊಂಡಿದೆ.

***ದತ್ತಾಂಶ-ಚಾಲಿತ ನಿರ್ಧಾರ ಕೈಗೊಳ್ಳುವಿಕೆ:*** ಸಂಪನ್ಮೂಲ ಹಂಚಿಕೆಯನ್ನು ಉತ್ತಮಗೊಳಿಸಲು ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಮುನ್ಸೂಚಕ ಮಾದರಿಗಳ ತಯಾರಿ, ಅಪಾಯದ ಮೌಲ್ಯಮಾಪನ ಮತ್ತು ನಿರ್ಧಾರಗಳ ಬೆಂಬಲ ವ್ಯವಸ್ಥೆಗಳಿಗಾಗಿ ಕೃಷಿಯಲ್ಲಿ ಬೃಹತ್ ದತ್ತಾಂಶ ವಿಶ್ಲೇಷಣೆ ಮತ್ತು ಯಂತ್ರ ಕಲಿಕೆಯನ್ನು ಒಟ್ಟು ಗೂಡಿಸುವುದನ್ನು ಒಳಗೊಂಡಿರುತ್ತದೆ.

**ಬೆಳೆ ಸುಧಾರಣೆ**

***ಅನುವಂಶೀಯ ಪರಿವರ್ತನೆ ಮತ್ತು ಉದ್ದೇಶಿತ ವಂಶವಾಹಿಗಳ ತಿದ್ದುಪಡಿ:*** ರೋಗಗಳಿಗೆ ಹೆಚ್ಚಿನ ಪ್ರತಿರೋಧ, ಅಜೀವಕ ಒತ್ತಡಗಳು, ಸುಧಾರಿತ ಪೌಷ್ಠಿಕಾಂಶದ ಸಂಕ್ಷಿಪ್ತ ರೂಪುರೇಷೆಗಳು ಮತ್ತು ಸಂವರ್ಧಿತ ಇಳುವರಿಯಲ್ಲಿ ಸಂವರ್ಧನೆಯೊಂದಿಗೆ ಬೆಳೆಗಳನ್ನು ಸುಧಾರಿಸಲು ವಂಶವಾಹಿಗಳ ತಿದ್ದುಪಡಿಯ ಉಪಕರಣಗಳ (ಸಿ.ಆರ್.ಐ.ಎಸ್.ಪಿ.ಆರ್.–ಸಿ.ಎ.ಎಸ್ 9) ಬಳಕೆ ಸೇರಿದಂತೆ ವಂಶವಾಹಿ ತಂತ್ರಜ್ಞಾನದಲ್ಲಿನ ಪ್ರಗತಿಯನ್ನು ಒಳಗೊಂಡಿರುತ್ತದೆ.

ಸಣ್ಣ ಮತ್ತು ಮಧ್ಯಮ– ಆದಾಯದ ದೇಶಗಳ ದೃಷ್ಟಿಕೋನದ ಮೇಲೆ ನಿರ್ದಿಷ್ಟವಾಗಿ ಗಮನವನ್ನು ಕೇಂದ್ರೀಕರಿಸುತ್ತ ಆಹಾರ ಭದ್ರತೆಗೆ ಜೀನೋಮ್–ತಿದ್ದುಪಡಿ ತಂತ್ರಜ್ಞಾನಗಳ ಸಂಭಾವ್ಯ ಕೊಡುಗೆಗಳು ಮತ್ತು ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಿಕೆ ಯಂತಹ ವಿಷಯಕ್ಕೆ ಹೆಚ್ಚು ಒತ್ತನ್ನು ನೀಡುತ್ತ ಕೃಷಿ ಪ್ರಧಾನ ವಿಜ್ಞಾನಿಗಳ ಜಿ20 ಸಭೆಯೊಂದರಲ್ಲಿ (ಜಿ 20 ಎಮ್.ಎ.ಸಿ.ಎಸ್.) ವಂಶವಾಹಿ–ತಿದ್ದುಪಡಿ ತಂತ್ರಜ್ಞಾನಗಳ ಕುರಿತು ವಿಶೇಷ ಗೋಷ್ಠಿಯನ್ನು ಆಯೋಜಿಸಲಾಗಿತ್ತು.

ಹವಾಮಾನ ಸ್ಥಿತಿ ಸ್ಥಾಪಕತ್ವ (ಉದಾಹರಣೆ ಅಕ್ಕಿ), ರೋಗ ನಿರೋಧಕತೆ (ಉದಾಹರಣೆಗೆ ಬಾಳೆ, ಜೋಳ, ಆಲೂಗಡ್ಡೆ, ಅಕ್ಕಿ, ಗೋಧಿ ಮತ್ತು ಸುವರ್ಣಗಡ್ಡೆ), ಪೌಷ್ಟಿಕಾಂಶದ ಸುಧಾರಣೆ ಮತ್ತು ಗ್ರಾಹಕ ಮತ್ತು ಪರಿಸರ ಸುರಕ್ಷತಾ ಲಕ್ಷಣಗಳಂತಹ (ಉದಾಹರಣೆ ಮರಗೆಣಸು) ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರೀಯ ಮತ್ತು

ಅಂತಾರಾಷ್ಟ್ರೀಯ ಸಂಶೋಧನಾ ಸಂಸ್ಥೆಗಳು ಕೈಗೊಂಡ ಬೆಳೆಗಳ ವಂಶವಾಹಿ ಗುಣಗಳ ತಿದ್ದುಪಡಿಯ ಪ್ರಯತ್ನಗಳು ಇವೆ.

***ಹವಾಮಾನ-ಸ್ಥಿತಿ ಸ್ಥಾಪಕತ್ವವುಳ್ಳ ಬೆಳೆಗಳು:*** ಪ್ರಸ್ತುತ ಸಂಶೋಧನೆಯು ಹವಾಮಾನ ಬದಲಾವಣೆಯಿಂದ ಉಂಟಾಗುವ ಸವಾಲುಗಳನ್ನು ಎದುರಿಸಲು ಬರ-ನಿರೋಧಕ ಮತ್ತು ಶಾಖ-ಸಹಿಷ್ಣು ಪ್ರಭೇದಗಳಂತಹ ತೀವ್ರ ಹವಾಮಾನ ಪರಿಸ್ಥಿತಿಗಳನ್ನು ತಡೆದುಕೊಳ್ಳುವ ಬೆಳೆಗಳನ್ನು ಅಭಿವೃದ್ಧಿಪಡಿಸುವುದರ ಕಡೆಗೆ ಕಾರ್ಯತಂತ್ರವನ್ನು ಕೇಂದ್ರೀಕರಿಸುತ್ತದೆ.

ಮುಂಗಾರು ಹಂಗಾಮಿನ ಪ್ರಧಾನ ಏಕ ದಳದ ಧಾನ್ಯವಾದ ಅಕ್ಕಿಗೆ ಹೋಲಿಸಿದರೆ, ಸಿ4 ಧಾನ್ಯಗಳು (ಸಜ್ಜೆ, ರಾಗಿ ಮತ್ತು ಜೋಳ) ಮಾನವನ ಪೋಷಣೆ ಮತ್ತು ನೀರಿನ ಬಳಕೆಗಳೂ ಸೇರಿದಂತೆ ಬಹು ಆಯಾಮಗಳಲ್ಲಿ ಪ್ರಯೋಜನಕಾರಿ ಎಂಬ ನಿಲುವನ್ನು ಬೆಂಬಲಿಸುವ ಸಂಶೋಧನಾ ವರದಿಗಳಿವೆ.

ಎಲ್ಲರಿಗೂ ತಿಳಿದಿರುವಂತೆ, ಭಾರತ ಸರ್ಕಾರವು 'ಪೌಷ್ಟಿಕ-ಧಾನ್ಯಗಳ'ನ್ನು ಗುರುತಿಸಿದೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಸಿರಿಧಾನ್ಯಗಳನ್ನು ಪರಿಚಯಿಸಿದೆ ಮತ್ತು ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆಯನ್ನು(2023) ಉತ್ತೇಜಿಸಿದೆ. ಪ್ರಮುಖ ಬೆಳೆಗಳಲ್ಲಿ ಹವಾಮಾನ ಸ್ಥಿತಿಸ್ಥಾಪಕತ್ವವನ್ನು ಸುಧಾರಿಸುವುದರತ್ತ ಗಮನಹರಿಸುವಾಗ, ನಾವು ಕಡಿಮೆ ಬಳಕೆ ಮಾಡುವ ಸಿ4 ಧಾನ್ಯಗಳೆಡೆಗೂ ಗಮನ ಹರಿಸಬೇಕಿದೆ.

**ಬೆಳೆ ರಕ್ಷಣೆ**

***ಜೈವಿಕ ಕೀಟಗಳು ಮತ್ತು ರೋಗಗಳ ನಿಯಂತ್ರಣ:*** ನೈಸರ್ಗಿಕ ಪರಭಕ್ಷಕಗಳು, ಜೈವಿಕ ಕೀಟನಾಶಕಗಳು, ಎಂಡೋಫೈಟ್‌ಗಳು ಮತ್ತು ಪ್ರಯೋಜನಕಾರಿ ಸೂಕ್ಷ್ಮಾಣು ಜೀವಿಗಳು ಮತ್ತು ಇತರ ಪರಿಸರ ಸ್ನೇಹಿ ವಿಧಾನಗಳ ಬಳಕೆಯ ಮೂಲಕ ರಾಸಾಯನಿಕ ಕೀಟನಾಶಕಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಸುಸ್ಥಿರ ಕೀಟ ನಿರ್ವಹಣೆಯಲ್ಲಿ ಆಸಕ್ತಿಯು ಹೆಚ್ಚುತ್ತಿದೆ.

ನಾವು ಯಶಸ್ವಿಯಾಗಿ ಹತೋಟಿಗೆ ತಂದ ಪ್ರಕರಣಗಳಿಂದ ಸ್ಫೂರ್ತಿ ಪಡೆದು ಕೃಷಿ-ಪರಿಸರ ವ್ಯವಸ್ಥೆಗಳ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಕಡಿಮೆ ಮಾಡುತ್ತಲೇ ಕೀಟಗಳು ಮತ್ತು ರೋಗಗಳನ್ನು ನಿರ್ವಹಿಸಲು ಅನುವಾಗುವ ನವೀನ ತಂತ್ರಗಳನ್ನು ರೂಪಿಸಿಕೊಳ್ಳಬೇಕು. ಪಂಜಾಬ್, ಹರಿಯಾಣ, ಉತ್ತರ ಪ್ರದೇಶ ಮತ್ತು ಬಿಹಾರದಂತಹ ರಾಜ್ಯಗಳಲ್ಲಿ 1972-73ರ ಅವಧಿಯಲ್ಲಿ ಆದ ಕಬ್ಬಿನ ಬೆಳೆಯಲ್ಲಿನ ಪೈರಿಲ್ಲಾ ರೋಗದ ಹರಡುವಿಕೆಗೆ ಪರಿಣಾಮಕಾರಿ ನಿಯಂತ್ರಣವು ಒಂದು ಉದಾಹರಣೆಯಾಗಿದೆ.

ಈ ಯಶಸ್ಸಿಗೆ ಜೈವಿಕ ನಿಯಂತ್ರಣ ಮಧ್ಯವರ್ತಕಗಳು ಅದರಲ್ಲೂ ವಿಶೇಷವಾಗಿ ಮೊಟ್ಟೆಯ ಪ್ಯಾರಾಸಿಟಾಯ್ಡನ ಶಿಸ್ತು ಬದ್ಧವಾದ ಬಳಕೆಯೇ ಕಾರಣವೆನ್ನಬಹುದು. 1987ರಲ್ಲಿ ಕಬ್ಬು ಬೆಳೆಯುವ ರಾಜ್ಯಗಳ ಮೇಲೆ ಮತ್ತೊಂದು ಆಘಾತಕಾರಿ ಪರಿಣಾಮ ಉದ್ಭವಿಸಿದಾಗ ಇಂತಹುದೇ ಯಶಸ್ಸು ದೊರಕಿತ್ತು.

ಜೈವಿಕ ಮಧ್ಯವರ್ತಕಗಳ ಬಳಕೆಯು ಪರಿಸ್ಥಿತಿಯನ್ನು ಹತೋಟಿಗೆ ತಂದಿದ್ದಲ್ಲದೆ ಸರ್ಕಾರಕ್ಕೆ ಗಣನೀಯ ಪ್ರಮಾಣದಲ್ಲಿ ವೆಚ್ಚದಲ್ಲಿನ ಉಳಿತಾಯಕ್ಕೂ ಕಾರಣವಾಯಿತು. ಇದಲ್ಲದೆ, 1994ರಲ್ಲಿ, ಕರ್ನಾಟಕದಲ್ಲಿ ಸಂಭವಿಸಿದ ತೀವ್ರವಾದ ಕೀಟಬಾಧೆಯನ್ನು ಅದರ ಸಂಭಾವ್ಯ ಜೈವಿಕ ನಿಯಂತ್ರಣ ಮಧ್ಯವರ್ತಕವನ್ನು ಬಳಸುವುದರ ಮೂಲಕ ಯಶಸ್ವಿಯಾಗಿ ನಿರ್ವಹಿಸಲಾಯಿತು.

**ನೈಸರ್ಗಿಕ ಸಂಪನ್ಮೂಲ ನಿರ್ವಹಣೆ– ಮಣ್ಣಿನ ಫಲವತ್ತತೆಯ ಸಮೃದ್ಧಿ, ಮಣ್ಣು ಮತ್ತು ನೀರಿನ ಮೂಲಕ ಜೀವ ಸಂವೃದ್ಧಿ**

***ಪುನರುತ್ಪಾದಕ ಕೃಷಿ:*** ಪುನರುತ್ಪಾದ ಕೃಷಿಯು ಪರಿಸರ ವ್ಯವಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಆಹಾರ ಭದ್ರತೆಯನ್ನು ಖಾತರಿಪಡಿಸಲು ಸಹಾಯ ಮಾಡುವ ವಿಧಾನವನ್ನು ಪ್ರತಿನಿಧಿಸುತ್ತದೆ. ಈ ವಿಧಾನದ ಮುಖ್ಯ ಉದ್ದೇಶವು ಪರಿಸರ ವ್ಯವಸ್ಥೆ ಮತ್ತು ರೈತರಿಗೆ ಸಮಾನವಾಗಿ ಪ್ರಯೋಜನಗಳನ್ನು ನೀಡುವ ಸಮಗ್ರ ಕಾರ್ಯತಂತ್ರಕ್ಕೆ ಒತ್ತು ನೀಡುತ್ತ, ಮಣ್ಣಿನ ಆರೋಗ್ಯ, ಜೀವ ವೈವಿಧ್ಯ ಮತ್ತು ಸ್ಥಿತಿ ಸ್ಥಾಪಕತ್ವದ ಸಂವರ್ಧನೆ ಮಾಡುವುದಾಗಿದೆ.

ಪೌಷ್ಟಿಕಾಂಶ–ಸಮೃದ್ಧ ಉತ್ಪನ್ನಗಳನ್ನು ನೀಡುವ ಸಾಮರ್ಥ್ಯವಿರುವ ಆರೋಗ್ಯಕರ ಮಣ್ಣಿನ ಕೃಷಿಯನ್ನು ಉತ್ತೇಜಿಸುವ ಮೂಲಕ, ಪುನರುತ್ಪಾದಕ ಕೃಷಿಯು ಮಣ್ಣಿನ ಜೈವಿಕ ವಿಘಟನೆಗೆ ಬದಲಾಗಿ ಭೂಮಿಯ ಸುಧಾರಣೆಯನ್ನು ಪೋಷಿಸುತ್ತದೆ. ಇದು, ಪ್ರತಿಯಾಗಿ, ಕೃಷಿ ಉತ್ಪಾದಕ ಕ್ಷೇತ್ರಗಳನ್ನು ಪ್ರೋತ್ಸಾಹಿಸುತ್ತದೆ, ಆರೋಗ್ಯಕರ ಸಮುದಾಯಗಳನ್ನು ಬೆಳೆಸುತ್ತದೆ ಮತ್ತು ಆರ್ಥಿಕತೆಯನ್ನು ಉತ್ತೇಜಿಸುತ್ತದೆ.

***ಮಣ್ಣಿನ ಪುಷ್ಟೀಕರಣ:*** ಪರಿವರ್ತಕ ಮಣ್ಣಿನ ಪರಿಹಾರ, ಸಂಕೋಚನ ನಿಯಂತ್ರಣ, ಸವಕಳಿ ತಡೆಗಟ್ಟುವಿಕೆ ಮತ್ತು ಫಲವತ್ತತೆ ನಿರ್ವಹಣೆಗಳಿಗೆ ಬಳಸುವ ಇಂಗಾಲದ ಪ್ರತ್ಯೇಕಿಕರಣದಲ್ಲಿನ ನವೀನ ವಿಧಾನಗಳು, ತಂತ್ರಜ್ಞಾನಗಳು ಸುಸ್ಥಿರ ಕೃಷಿ ಪದ್ಧತಿಗಳನ್ನು ಮರು ವ್ಯಾಖ್ಯಾನಿಸುವಲ್ಲಿ ಮುಂಚೂಣಿಯಲ್ಲಿವೆ.

***ಕೃಷಿ ಪರಿಸರ ವಿಜ್ಞಾನ:*** ಪ್ರಸ್ತುತ, ಪರಿಸರದ ತತ್ವಗಳನ್ನು ಪರಿಗಣಿಸುವ ಸುಸ್ಥಿರ ಕೃಷಿ ಪದ್ಧತಿಗಳ ಮಹತ್ವವು ಹೆಚ್ಚು ಹೆಚ್ಚು ಅರಿವಿಗೆ ಬರುತಿದ್ದು, ಅದು ಪರಿಸರದ ಪರಿಣಾಮವನ್ನು ಕಡಿಮೆ ಮಾಡುವ, ಜೀವವೈವಿಧ್ಯವನ್ನು ಉತ್ತೇಜಿಸುವ ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವ ಗುರಿಯನ್ನು ಹೊಂದಿದೆ.

***ನೀರಿನ ವಿವೇಚನಾತ್ಮಕ ಬಳಕೆ:*** ನೀರಿನ ಮಟ್ಟವು ಕ್ಷೀಣಿಸುತ್ತಿರುವ ಸನ್ನಿವೇಶಗಳಲ್ಲಿ, ನೀರಿನ ಸಂಗ್ರಹಣೆ ಮತ್ತು ನೀರಾವರಿ ವ್ಯವಸ್ಥೆಗಳನ್ನು ನಿಖರಗೊಳಿಸುತ್ತ ನೀರಿನ ವಿವೇಚನಾತ್ಮಕ ಬಳಕೆಯನ್ನು ಖಚಿತಪಡಿಸಿಕೊಳ್ಳಬೇಕು. ಮಳೆ ನೀರು ಕೊಯ್ಲು ವ್ಯವಸ್ಥೆಗಳನ್ನು ಸ್ಥಾಪಿಸುವುದು, ಜಲಾಶಯಗಳನ್ನು ನಿರ್ಮಿಸುವುದು, ಸಮರ್ಥ ನೀರಾವರಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಮತ್ತು ನೀರಿನ ಬಳಕೆಯನ್ನು ಅರ್ಥಮಾಡಿಕೊಳ್ಳುವುದು ಪ್ರಮುಖ ಹಂತಗಳಾಗಿವೆ.

**ಮಾನವ ಪೌಷ್ಟಿಕಾಂಶ**

***ಪರ್ಯಾಯ ಸಸಾರಜನಕದ ಮೂಲಗಳು:*** ಸಾಂಪ್ರದಾಯಿಕ ಜಾನುವಾರು ಸಾಕಣೆಯಿಂದ ಪಾರಿಸರಿಕ ಪ್ರಭಾವದ ಕುರಿತು ಹೆಚ್ಚುತ್ತಿರುವ ಕಳವಳಗಳಿಗೆ ಪ್ರತಿಕ್ರಿಯಾತ್ಮಕವಾಗಿ, ಸಸ್ಯ-ಆಧಾರಿತ ಸಸಾರಜನಕಗಳು ಮತ್ತು ಸಂಸ್ಕರಿತ ಮಾಂಸದಂತಹ ಪರ್ಯಾಯ ಸಸಾರಜನಕದ ಮೂಲಗಳ ಅನ್ವೇಷಣೆಯಂತಹ ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ.

**ಕೋಯ್ಲೋತ್ತರ ತಂತ್ರಜ್ಞಾನ**

***ಕೃತಕ ಬುದ್ಧಿಮತ್ತೆ ಆಧಾರಿತ ಕೋಯ್ಲೋತ್ತರ ತಂತ್ರಜ್ಞಾನಗಳು:*** ಬಹುಬೇಗ ಹಾಳಾಗುವ ಸರಕುಗಳ ಮೇಲೆ ಪ್ರಮುಖವಾಗಿ ಗಮನವನ್ನು ಕೇಂದ್ರಿಕರಿಸುತ್ತಾ, ಹಣ್ಣುಗಳು ಮತ್ತು ತರಕಾರಿಗಳ ಕೋಯ್ಲೋತ್ತರ ನಿರ್ವಹಣೆಗಾಗಿ ಕೃತಕ ಬುದ್ಧಿಮತ್ತೆ-ಬೆಂಬಲಿತ ಸಾಧನಗಳ ಬಳಕೆ ಮಾಡುವಿಕೆಯು, ಕೋಯ್ಲೋತ್ತರ ನಷ್ಟವನ್ನು ಕಡಿಮೆ ಮಾಡಲು ಉಪಯುಕ್ತ ವಾಗಿದೆ (ಇದು ಶೇ.30ವರೆಗೆ ಇರಬಹುದು).

ಕಳೆದ ಎರಡು ದಶಕಗಳಲ್ಲಿ, ತೋಟಗಾರಿಕಾ ಉತ್ಪಾದನಾ ವ್ಯವಸ್ಥೆಗಳು ಮತ್ತು ಕೋಯ್ಲೋತ್ತರ ನಿರ್ವಹಣೆ ಪ್ರಕ್ರಿಯೆಗಳ ಕುರಿತಾದ ದತ್ತಾಂಶದ ಲಭ್ಯತೆಯಲ್ಲಿ ಗಮನಾರ್ಹ ಏರಿಕೆಯಾಗಿದೆ. ಇದಕ್ಕಾಗಿ ನಾವೀನ್ಯತೆಯುಳ್ಳ ಸಂವೇದಕ ತಂತ್ರಜ್ಞಾನಗಳು, ಇಂಟರ್ನೆಟ್ ಆಫ್ ಥಿಂಗ್ಸ್‌ಗಳು ಮತ್ತು ಕ್ಲೌಡ್-ಆಧಾರಿತ ದತ್ತಾಂಶ ಶೇಖರಣಾ ವ್ಯವಸ್ಥೆಗಳು ಹುಟ್ಟಿಕೊಂಡಿರುವುದಕ್ಕೆ ಧನ್ಯವಾದ ಸಲ್ಲಿಸಬೇಕು. ಕೋಯ್ಲೋತ್ತರ ತಂತ್ರಜ್ಞಾನದಲ್ಲಿ ನಾವು ಅತ್ಯಾಧುನಿಕ ದತ್ತಾಂಶ ವಿಶ್ಲೇಷಣೆ ಮತ್ತು ಕೃತಕ ಬುದ್ಧಿಮತ್ತೆಯನ್ನು ಅಳವಡಿಸಿಕೊಳ್ಳುವ ಗುರಿಯನ್ನು ಹೊಂದಿರಬೇಕು.

**ಕೃಷಿ ವ್ಯಾಪಾರ**

***ರೈತರು ಮತ್ತು ರೈತರ ಒಗ್ಗೂಡಿಸುವಿಕೆ:*** ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಒ.)ಯಲ್ಲಿ ರೈತರ ಒಗ್ಗೂಡಿಸುವಿಕೆಯು ಉತ್ಪಾದಕ ಪ್ರಮಾಣವನ್ನು ಹೆಚ್ಚಿಸುವಲ್ಲಿ ಮತ್ತು ಸಣ್ಣ

ಮತ್ತು ಅತಿ ಸಣ್ಣ ರೈತರ ಜೀವನೋಪಾಯವನ್ನು ಬಲಪಡಿಸುವಲ್ಲಿ ಸಮರ್ಥ ಪರಿಹಾರವನ್ನು ಒದಗಿಸುತ್ತದೆ. ಆದಾಗ್ಯೂ, ನಿಯಮಗಳಿಗೆ ಸಂಬಂಧಿಸಿದ ಹಲವಾರು ಸಮಸ್ಯೆಗಳು; ಕಾರ್ಯಾಚರಣೆ ಮತ್ತು ಆಡಳಿತ ಸಮಸ್ಯೆಗಳು; ಮಾರುಕಟ್ಟೆ, ಹಣಕಾಸು ಮತ್ತು ಮೂಲ ಸೌಕರ್ಯಗಳ ಪ್ರವೇಶಿಕೆಗಳು ರೈತ ಉತ್ಪಾದಕ ಸಂಸ್ಥೆಗಳ ದೀರ್ಘಾವಧಿಯ ಸುಸ್ಥಿರತೆಗೆ ಅಡಚಣೆಯಾಗುತ್ತಿವೆ.

ಸಾಲದ ಮೌಲ್ಯಮಾಪನದ ನಮೂನೆಗಳನ್ನು ಸರಳೀಕರಿಸುವುದು ಮತ್ತು ಪರಿಣಾಮಕಾರಿಯಾಗಿ ಸಂವಹನ ಮಾಡುವುದು, ಹಣಕಾಸು ಸಂಸ್ಥೆಗಳ ಮೂಲಕ ಹಣ ಹೂಡಿಕೆಗೆ ಇರುವ ಸೀಮಿತ ಪ್ರವೇಶಿಕೆಯ ಮೂಲಕ ಹೇರಲಾಗುವ ನಿರ್ಬಂಧಗಳನ್ನು ನಿವಾರಿಸುವಲ್ಲಿ ಮಹತ್ವದ ಹೆಜ್ಜೆಯಾಗುತ್ತದೆ. ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆಗಾಗಿ ಅನುಭವಿ, ತರಬೇತಿ ಪಡೆದ ಮತ್ತು ವೃತ್ತಿ ಪರವಾಗಿ ಅರ್ಹರಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳನ್ನು ನೇಮಿಸುವ ಮೂಲಕ ವಾಣಿಜ್ಯಿಕವಾಗಿ ಸುಸ್ಥಿರ ವ್ಯಾಪಾರ ಮಾದರಿಗಳನ್ನು ರಚಿಸುವುದು ಅತಿ ಅವಶ್ಯಕವಾಗಿದೆ.

***ಕೃಷಿಯಲ್ಲಿ ಮಾಹಿತಿ ಸರಪಳಿ:*** ಕೃಷಿ ಪೂರೈಕೆ ಸರಪಳಿಯಲ್ಲಿ ಪಾರದರ್ಶಕತೆ ಮತ್ತು ಪತ್ತೆಹಚ್ಚುವಿಕೆಯನ್ನು ಹೆಚ್ಚಿಸಲು ಮಾಹಿತಿ ಸರಪಳಿ ತಂತ್ರಜ್ಞಾನದ ಬಳಕೆಯು ಆಹಾರ ಸುರಕ್ಷತೆ, ವಂಚನೆ ಮತ್ತು ಅಸಮರ್ಥ ವಿತರಣೆಯಂತಹ ಸಮಸ್ಯೆಗಳನ್ನು ಪರಿಹರಿಸಲು ನಮಗೆ ನೆರವಾಗುತ್ತದೆ.

ಆತ್ಮೀಯ ಸಹೋದ್ಯೋಗಿಗಳೇ, ಭಾರತೀಯ ಕೃಷಿಯನ್ನು ಭವಿಷ್ಯತ್ತಿಗಾಗಿ ಅಣಿಗೊಳಿಸಲು ನಾವು ಸವಾಲುಗಳನ್ನು ಸಮಗ್ರ ರೀತಿಯಲ್ಲಿ ನೋಡಬೇಕಾಗಿದೆ. ಜನಸಂಖ್ಯಾಶಾಸ್ತ್ರ, ಆಹಾರದ ಬೇಡಿಕೆ ಮತ್ತು ಬಳಕೆ, ಹವಾಮಾನ ಬದಲಾವಣೆ ಮತ್ತು ತಂತ್ರಜ್ಞಾನಗಳನ್ನು ಭಾರತೀಯ ಕೃಷಿಯ ಪ್ರಮುಖ ನಿರ್ವಾಹಕಗಳೆನ್ನಬಹುದು.

ಈಗಾಗಲೇ ಹೇಳಿದಂತೆ, ಆಹಾರ ಮತ್ತು ಪೌಷ್ಟಿಕತೆ, ಆರೋಗ್ಯ ಭದ್ರತೆ, ಪರಿಸರ ಅವನತಿ, ಕಡಿಮೆ ಉತ್ಪಾದಕತೆ ಮತ್ತು ಕಡಿಮೆ ಆದಾಯ ಹಾಗೂ ಅನಿಯಮಿತ ನೀರಿನ ಬಳಕೆಯ ವಿಷಯಗಳಲ್ಲಿ ನಾವು ಹಲವಾರು ಸವಾಲುಗಳನ್ನು ಎದುರಿಸುತ್ತಿದ್ದೇವೆ. ಈ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ನಾವು ಸನ್ನದ್ಧರಾಗಬೇಕಿದೆ.

ಹಸಿರುಮನೆ ಅನಿಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಮೂಲಕ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು (ಎಸ್.ಡಿ.ಜಿ.ಗಳು) ಮತ್ತು ಇಂಗಾಲದ ತಟಸ್ಥತೆಯನ್ನು ಸಾಧಿಸುವ ಮೂಲಕ ನಾವು ಅಧಿಕ ಪ್ರಾಮಾಣದಲ್ಲಿ ಆಹಾರವನ್ನು ಉತ್ಪಾದಿಸಬೇಕಾಗಿದೆ. ಆದ್ದರಿಂದ, ನಮ್ಮ ಭವಿಷ್ಯದ ಸಂಶೋಧನೆಯು 'ಆಹಾರ, ಪೋಷಣೆ ಮತ್ತು ಆದಾಯ

ಭದ್ರತೆ' ಮತ್ತು 'ಪರಿಸರ ಸ್ನೇಹಿ ಕೃಷಿ'ಯ ಕುರಿತಾಗಿರಬೇಕು. ಒಣ ಪ್ರದೇಶಗಳಲ್ಲಿ ಮಳೆಯಾಶ್ರಿತ ಕೃಷಿಗೆ ನಾವು ಒತ್ತು ನೀಡಬೇಕಾಗಿದೆ.

ಹವಾಮಾನ ಬದಲಾವಣೆಯು ಈಗಾಗಲೇ ಇಡೀ ಪ್ರಪಂಚದ ಮೇಲೆ ಪರಿಣಾಮ ಬೀರುತ್ತಿದ್ದು ಇದರ ಜೊತೆಗೆ ಬರ, ಉಷ್ಣದ ಅಲೆಗಳು, ಅತಿವೃಷ್ಟಿ ಮತ್ತು ಪ್ರವಾಹಗಳಂತಹ ತೀವ್ರ ಹವಾಮಾನ ಪರಿಸ್ಥಿತಿಗಳು ಆಗಾಗ್ಗೆ ಸಂಭವಿಸುತ್ತಿವೆ. ವೇಗವಾಗಿ ಬದಲಾಗುತ್ತಿರುವ ಹವಾಮಾನದ ಇತರ ಪರಿಣಾಮಗಳೆಂದರೆ ಹೆಚ್ಚುತ್ತಿರುವ ಸಮುದ್ರ ಮಟ್ಟಗಳು, ಸಾಗರ ಆಮ್ಲೀಕರಣ ಮತ್ತು ಜೀವವೈವಿಧ್ಯತೆಯ ನಷ್ಟ.

ಜಾಗತೀಕ ತಾಪಮಾನವನ್ನು ಜಾಗತಿಕ ಹವಾಮಾನ ಬದಲಾವಣೆ ಅಧ್ಯಯನಕ್ಕಾಗಿ ಸ್ಥಾಪಿತವಾದ ಅಂತರ-ಸರ್ಕಾರದ ನಿಯೋಗ (ಐ.ಪಿ.ಸಿ.ಸಿ.)ವು ನಿಗದಿಪಡಿಸಿರುವ ಮಿತಿಯಾದ 1.50 ಸೆಂಟಿಗ್ರೇಡ್‌ಗೆ ಸೀಮಿತಗೊಳಿಸಲು, 21ನೇ ಶತಮಾನದ ಮಧ್ಯ ಭಾಗದಲ್ಲಿ ಇಂಗಾಲದ ತಟಸ್ಥತೆಯು ಅತ್ಯಗತ್ಯ ಎಂದು ವೈಜ್ಞಾನಿಕವಾಗಿ ಕ್ರೋಢಿಕರಿಸಲಾದ ದತ್ತಾಂಶಗಳ ಆಧಾರದ ಮೇಲೆ ವಾದಿಸಲಾಗಿದೆ. ಇಂಗಾಲದ ತಟಸ್ಥತೆ ಎಂದರೆ ಇಂಗಾಲದ ಸಿಂಕ್‌ಗಳಲ್ಲಿ ಇಂಗಾಲವನ್ನು ಹೊರಸೂಸುವ ಮತ್ತು ವಾತಾವರಣದಿಂದ ಇಂಗಾಲವನ್ನು ಹೀರಿಕೊಳ್ಳುವುದರ ನಡುವೆ ಸಮತೋಲನವನ್ನು ಸಾಧಿಸುವುದಾಗಿದೆ.

ನಮ್ಮ ಪರಿಸರ ವ್ಯವಸ್ಥೆಯನ್ನು ಸಂರಕ್ಷಿಸಲು, ನಮ್ಮ ಪ್ರಯತ್ನಗಳು ಇಂಗಾಲ-ಧನಾತ್ಮಕತೆಯಿಂದ ಇಂಗಾಲ-ಋಣಾತ್ಮಕತೆಯಡೆಗೆ, ಹವಾಮಾನ-ಸೂಕ್ಷ್ಮತೆಯಿಂದ ಹವಾಮಾನ-ಸ್ಥಿತಿಸ್ಥಾಪಕ ಕೃಷಿಯ ಕಡೆಗೆ ಸಾಗಬೇಕು. ನಾವು ಪರಿಹಾರ-ಸೃಜಿಸುವ ಮತ್ತು ಯೋಜನಾ-ಆಧಾರಿತ ಫಲಿತಾಂಶ-ಸೃಜಿಸುವ ಸಂಶೋಧನೆಗಳನ್ನು ಯೋಜಿಸಬೇಕು. ಬೆಳೆ ವ್ಯವಸ್ಥೆಯಿಂದ ಆಹಾರ ವ್ಯವಸ್ಥೆ ವಿಧಾನದವರೆಗೆ ಉತ್ತಮವಾಗಿ ಯೋಜಿಸಲ್ಪಟ್ಟ ಚಿಂತನೆಯ ಅಗತ್ಯವಿದೆ. ಉತ್ತಮ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಗಾಗಿ ಫೋರ್ಕ್ ಟು ಫಾರ್ಮ್ ವಿಧಾನವನ್ನು ಅನುಸರಿಸುವ ಅಗತ್ಯವಿದೆ.

ಸಂಕೀರ್ಣವಾದ ಕೃಷಿ ವ್ಯವಸ್ಥೆಯೊಳಗೆ ತ್ವರಿತವಾದ ಮತ್ತು ಪರಿಣಾಮಕಾರಿ ಫಲಿತಾಂಶಗಳನ್ನು ಸಾಧಿಸಲು 'ಒ.ಎಸ್.ಒ.ಪಿ.' (ಒಬ್ಬ ವಿಜ್ಞಾನಿ, ಒಂದು ಉತ್ಪನ್ನ) ವಿಧಾನವನ್ನು ನಾನು ಬಲವಾಗಿ ಪ್ರತಿಪಾದಿಸುತ್ತೇನೆ. ಉತ್ತಮ ಯಶಸ್ಸು ಸಿಗಬೇಕೆಂದರೆ, ಖಾಸಗಿ ಪಾಲುದಾರರೊಂದಿಗೆ ಸಹಯೋಗವನ್ನು ಹೊಂದುವುದು ಮತ್ತು ಎಲ್ಲಾ ಕ್ಷೇತ್ರಗಳಲ್ಲಿನ ಕಾರ್ಯಕ್ಷಮತೆ ಆಧಾರಿತ ಮೌಲ್ಯಮಾಪನ ಅಳವಡಿಸಿಕೊಳ್ಳುವುದು ಲಾಭದಾಯಕವಾಗಬಲ್ಲುದು ಎಂದು ಅಭಿಪ್ರಾಯಪಡುತ್ತೇನೆ.

ನಮ್ಮ ಹಿರಿಯರು ಕೃಷಿ ವಲಯದಲ್ಲಿ ಅತ್ಯುತ್ತಮ ಸಾಧನೆ ಗೈದಿದ್ದಾರೆ, ಆ ಮುನ್ನಡೆಯನ್ನು ಮತ್ತು ಸಂಶೋಧನಾ ಫಲಿತಾಂಶಗಳಲ್ಲಿನ ಪ್ರಗತಿಯನ್ನು ಹವಾಮಾನ

ಸಂವೇದಿತ, ಪರಿಸರ ಸ್ನೇಹಿ ಮಾದರಿಯಲ್ಲಿ ಮುಂದೊಯ್ಯಬೇಕಾಗಿದೆ. ಕೃಷಿ ಕ್ಷೇತ್ರದಲ್ಲಿನ ಮತ್ತು ರೈತರ ಕಲ್ಯಾಣಕ್ಕಾಗಿ ಡಾ. ಎಂ.ಎಸ್. ಸ್ವಾಮಿನಾಥನ್‌ರವರ ಅಪಾರ ಕೊಡುಗೆಗಳನ್ನು ಗುರುತಿಸಿ ಭಾರತ ಸರ್ಕಾರವು ಅವರಿಗೆ ಭಾರತ ಗಣರಾಜ್ಯದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ **ಭಾರತರತ್ನ**ವನ್ನು ನೀಡುತ್ತಿದೆ ಎಂದು ತಿಳಿದು ನನಗೆ ಹೆಮ್ಮೆ ಎನಿಸುತ್ತದೆ. ಅವರ ದೂರದೃಷ್ಟಿಗಳು, ಮಾರ್ಗದರ್ಶನಗಳು ಭಾರತೀಯ ಕೃಷಿಯಲ್ಲಿ ಕ್ರಾಂತಿಕಾರಿ ಪರಿವರ್ತನೆ ತಂದಿರುವುದಲ್ಲದೆ ಭಾರತದಲ್ಲಿ ಆಹಾರ ಭದ್ರತೆ ಮತ್ತು ಸಮೃದ್ಧಿಯನ್ನೂ ಸಹ ಖಾತ್ರಿಪಡಿಸಿದೆ.

ನಾವೆಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡೋಣ ಮತ್ತು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳಾದ ಜೀನೋಮ್ ತಿದ್ದುಪಡಿ, ಹಾಲೊ ಜೆನೋಮ್ ಆಧಾರಿತ ತಂತ್ರಜ್ಞಾನಗಳು, ಯಂತ್ರ ಕಲಿಕೆ ಮತ್ತು ಕೃತಕ ಬುದ್ಧಿಮತ್ತೆ ಆಧಾರಿತ ಉಪಕರಣ ಮತ್ತು ತಂತ್ರಜ್ಞಾನಗಳು ಮತ್ತು ನ್ಯಾನೊ–ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳೋಣ. ಕೃಷಿಯಲ್ಲಿ ನ್ಯಾನೊ ತಂತ್ರಜ್ಞಾನದ ಅಳವಡಿಕೆಯಿಂದ ಕೃಷಿ ಪದ್ಧತಿಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತರಬಹುದಾದ, ಬೆಳೆ ಇಳುವರಿಯನ್ನು ಹೆಚ್ಚಿಸಬಹುದಾದ ಮತ್ತು ಸುಸ್ಥಿರ ಕೃಷಿ ವ್ಯವಸ್ಥೆಯನ್ನು ಉತ್ತೇಜಿಸಬಹುದಾದ ಸಾಧ್ಯಾಸಾಧ್ಯತೆಯು ಬಹುಳವಾಗಿದೆ ಎಂದು ನಾನು ಭಾವಿಸುತ್ತೇನೆ.

ನ್ಯಾನೊ–ವಿಜ್ಞಾನದ ಈ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಯು ಮುಂದುವರಿದಂತೆ, ಬೆಳೆ ಇಳುವರಿ ಸುಧಾರಣೆ, ಜಾನುವಾರಗಳ ಆರೋಗ್ಯ ಮೇಲ್ವಿಚಾರಣೆ, ಸಂಪನ್ಮೂಲಗಳ ಬಳಕೆಯಲ್ಲಿ ದಕ್ಷತೆ ಮತ್ತು ಪರಿಸರ ಸಂರಕ್ಷಣೆಯಂತಹ ಸಂಭಾವ್ಯ ಪ್ರಯೋಜನಗಳು ಕೃಷಿಯ ಭವಿಷ್ಯವನ್ನು ರೂಪಿಸುವ ನಿರೀಕ್ಷೆಯಿದೆ. ಆದಾಗ್ಯೂ, ಕೃಷಿಯಲ್ಲಿ ನ್ಯಾನೊ ತಂತ್ರಜ್ಞಾನಗಳ ಜವಾಬ್ದಾರಿಯುತ ಮತ್ತು ಸುರಕ್ಷಿತ ಅಳವಡಿಕೆಯನ್ನು ಖಚಿತಪಡಿಸಿಕೊಳ್ಳಲು ನೈತಿಕ, ಪಾರಿಸರಿಕ ಮತ್ತು ನಿಯಂತ್ರಕ ಅಂಶಗಳನ್ನು ಪರಿಗಣಿಸುವುದು ಅತ್ಯಂತ ಮಹತ್ವದ್ದಾಗಿದೆ.

ಅಭಿನಂದನೆಗಳು, ಪದವೀಧರರೇ! ನೀವು ಈ ಪ್ರತಿಷ್ಠಿತ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿಗಳಾಗುತ್ತಿರುವ ಈ ಸಂದರ್ಭದಲ್ಲಿ, ನಿಮ್ಮ ಶೈಕ್ಷಣಿಕ ಸಾಧನೆಗಳಿಗಾಗಿ ಪದವಿ ಮತ್ತು ಪದಕಗಳನ್ನು ಪಡೆಯುತ್ತಿರುವ ನಿಮ್ಮೆಲ್ಲರಿಗೂ ನನ್ನ ಆತ್ಮೀಯ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ.

ಇದು ಭಾವನಾತ್ಮಕತೆ, ಹೆಮ್ಮೆ ಮತ್ತು ಸಾಧನೆಯ ಸಾರ್ಥಕ ಪ್ರಜ್ಞೆಗಳಿಂದ ತುಂಬಿದ ಮಹತ್ವದ ಸಂದರ್ಭವಾಗಿದೆ. ಘಟಿಕೋತ್ಸವವು ಪದವೀಧರರ ಸಮಾರಂಭವಾಗಿ, ಅವರ ಶೈಕ್ಷಣಿಕ ಫಲಿತಾಂಶದ ಕುರಿತಾಗಿ ಚಿಂತನ ಮಂಥನ ಮಾಡಲು ಮತ್ತು ಭವಿಷ್ಯದ ನಡೆಗಳ ಕುರಿತಾಗಿ ಯೋಜನೆ ರಚಿಸಲು ಅನುವು ಮಾಡಿಕೊಡುತ್ತದೆ.

ನಿಮ್ಮ ಉತ್ಸಾಹ ಮತ್ತು ಸಾಧನೆಗಳ ಕಾರಣದಿಂದಾಗಿ ವಿಶ್ವವಿದ್ಯಾನಿಲಯವು ಕೆಲವೇ ವರ್ಷಗಳಲ್ಲಿ ಹಲವಾರು ಪ್ರಶಸ್ತಿಗಳನ್ನು ಪಡೆದಿದೆ ಮತ್ತು ಗುಣಮಟ್ಟದ ಶೈಕ್ಷಣಿಕ ಚಟುವಟಿಕೆಗಳಿಂದಾಗಿ ಹಲವಾರು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಹಯೋಗಗಳನ್ನು ಆಕರ್ಷಿಸಿದೆ.

ಕೃಷಿಯ ಅಭಿವೃದ್ಧಿಗೆ ಯಂತ್ರಮಾನವ, ಡ್ರೋನ್‌ಗಳು, ಬೃಹತ್ ದತ್ತಾಂಶ ನಿರ್ವಹಣೆ ಮತ್ತು ಪುನರುತ್ಪಾದಕ ಕೃಷಿಯಂತಹ ಸುಧಾರಿತ ತಂತ್ರಜ್ಞಾನಗಳ ಬಳಕೆಯು ಅಗತ್ಯವಾಗಿದೆ. ಆತ್ಮೀಯ ಪದವೀಧರರೇ, ನಿಮ್ಮ ಶಕ್ತಿ ಮತ್ತು ಉತ್ಸಾಹದಿಂದ ಹಲವಾರು ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಬಹುದು. ಸ್ಪಷ್ಟ ಮುನ್ನೋಟ ಮತ್ತು ರಾಷ್ಟ್ರೀಯ ಗುರಿಗಳೊಂದಿಗೆ ಮೂಲಭೂತ ಮತ್ತು ಕಾರ್ಯತಂತ್ರೀಯ ಕೃಷಿ–ಜ್ಞಾನ ನೆಲೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಗಣನೀಯವಾದ ಕೊಡುಗೆಯನ್ನು ನೀಡಿದೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ವತಿಯಿಂದ ರಚಿಸಲಾದ ಕೃಷಿ ಪೋಷಣಾ ಕೇಂದ್ರ ಮತ್ತು ಮೂಲ ಸೌಕರ್ಯ ಸೌಲಭ್ಯಗಳು ಕೃಷಿ–ಪದವೀಧರರನ್ನು ಸಕ್ರಿಯಗೊಳಿಸಲು ಮತ್ತು ಅವರ ಮನಸ್ಸಿನಲ್ಲಿ ಉದ್ಯಮಶೀಲತೆಯ ಚಿಂತನೆಯನ್ನು ಹುಟ್ಟುಹಾಕಲು ಸಹಾಯ ಮಾಡುತ್ತಿವೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ–ನಾವೀನ್ಯತಾ ಕೇಂದ್ರವು, ಉದಯೋನ್ಮುಖ ವಾಣಿಜ್ಯೋದ್ಯಮಿಗಳು ಕೃಷಿ ವಲಯದಲ್ಲಿ ಹೊಸ ಸಾಹಸಗಳಿಗೆ ಅಣಿಯಾಗುವಂತೆ ಪ್ರೋತ್ಸಾಹಿಸುವ ಸಲುವಾಗಿ 2023–24ರ ಅವಧಿಯಲ್ಲಿ ಕೃಷಿ ಮತ್ತು ಸಂಬಂಧಿತ ವಲಯಗಳಿಂದ 30ಕ್ಕೂ ಹೆಚ್ಚು ನವೋದ್ಯಮಿಗಳಿಗೆ ನೆರವಾಗಿದೆ ಎಂದು ತಿಳಿದು ನನಗೆ ಬಹಳ ಸಂತೋಷವಾಗಿದೆ.

ಪದವಿಗಳನ್ನು ಪಡೆಯುವುದು ಶಿಕ್ಷಣದ ಪ್ರಮುಖ ಅಂಶವಾಗಿದ್ದರೂ, ಶಿಕ್ಷಣವನ್ನು ಪಡೆದುಕೊಳ್ಳುವುದರ ಹಿಂದಿನ ಮೂಲಭೂತ ಕಲ್ಪನೆಯು ಒಬ್ಬ ವ್ಯಕ್ತಿಯಾಗಿ ಕಲಿಯುವುದು ಮತ್ತು ಬೆಳೆಯುವುದು ಎಂಬುದನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ. ಶಿಸ್ತು, ನಮ್ರತೆ, ಸತ್ಯನಿಷ್ಠೆ ಮತ್ತು ಇತರರ ಕುರಿತು ಗೌರವವನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ. ಆತ್ಮೀಯ ವಿದ್ಯಾರ್ಥಿಗಳೇ, ನಾವಿಂದು ಸಾಧನೆಗಳನ್ನು ಸಂಭ್ರಮಿಸುತ್ತಿದ್ದರೂ ಸಹ, ಬೆಳವಣಿಗೆ ಮತ್ತು ಸುಧಾರಣೆಗೆ ಯಾವಾಗಲೂ ಅವಕಾಶವಿದೆ ಎಂಬುದನ್ನು ನೆನಪಿಡಿ.

ಪದವಿಧರರಾಗಿ ಹೊರಹೊಮ್ಮುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ನಾನು ಮತ್ತೊಮ್ಮೆ ಹೃದಯಾರೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಿಮ್ಮ ಜೀವನದುದ್ದಕ್ಕೂ ಹರ್ಷೋಲ್ಲಾಸ ಹೊಂದುವಿರೆಂದು ಮತ್ತು ನಿಮ್ಮ ಆಯ್ಕೆಯ ವೃತ್ತಿಯಲ್ಲಿ ಅದ್ಭುತ ಯಶಸ್ಸನ್ನು

ಪಡೆಯುವಿರೆಂದು ನಾನು ಭಾವಿಸುತ್ತೇನೆ. ಇಂದು ಚಿನ್ನದ ಪದಕಗಳನ್ನು ಮತ್ತು ಪಾರಿತೋಷಕಗಳನ್ನು ಪಡೆದಂತಹ ಎಲ್ಲ ಸಾಧಕರಿಗೆ ಈ ವೇದಿಕೆಯ ಮೂಲಕ ಅಭಿನಂದಿಸುತ್ತೇನೆ. ಕಲಿಕೆ ಎನ್ನುವ ಸಂಸ್ಕಾರವು ಜೀವನದುದ್ದಕ್ಕೂ ಅವಿರತವಾಗಿ ನಡೆಯುತ್ತಿರಬೇಕು ಎನ್ನುವುದನ್ನು ಸದಾ ನೆನಪಿಟ್ಟುಕೊಳ್ಳಿ. ನಿಮಗೆಲ್ಲರಿಗೂ ಉಜ್ವಲ ಮತ್ತು ಯಶಸ್ವಿ ಭವಿಷ್ಯ ದೊರೆಯಲೆಂದು ಹಾರೈಸುತ್ತೇನೆ.

ಕೊನೆಯದಾಗಿ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಐವತ್ತೇಂಟನೇಯ ಘಟಿಕೋತ್ಸವವನ್ನು ಅತ್ಯಂತ ಯಶಸ್ವಿಯಾಗಿ, ಅರ್ಥಪೂರ್ಣವಾಗಿ ಆಯೋಜಿಸಿ ದಂತಹ ಗೌರವಾನ್ವಿತ ಕುಲಾಧಿಪತಿಗಳಿಗೂ, ಸಹ-ಕುಲಾಧಿಪತಿಗಳಿಗೂ, ಕುಲಪತಿಗಳಿಗೂ ಮತ್ತು ಅಧ್ಯಾಪಕ ವೃಂದಕ್ಕೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ಜೈಜವಾನ್, ಜೈಕಿಸಾನ್, ಜೈ ವಿಜ್ಞಾನ್, ಜೈಅನುಸಂಧಾನ್!**

**Dr. Himanshu Pathak,** Secretary, Department of Agricultural Research and Education, GoI and Director General, ICAR, New Delhi was born on 2nd February, 1965 and completed his B.Sc. (Agri.) from Banaras Hindu University, Varanasi in 1986 and M.Sc. (Agri.) in the year 1988 and then Ph.D. in the year 1992 from Indian Agricultural Research Institute, New Delhi. He is specialized in the areas of Soil Science, Climate Change and Abiotic Stress Management.



*Dr. Himanshu Pathak*

He was the Director of the prestigious ICAR-National Rice Research Institute, Cuttack, Odisha and ICAR-National Institute of Abiotic Stress Management, Baramati, Maharashtra . He started his service as Scientist at IARI, New Delhi in 1992.

Dr. Himanshu Pathak has several Post-Doctorate experiences and International trainings in his accolade, few of them are BOYSCAST Fellow, University of Essex, UK; Humboldt Fellow, Institute of Meteorology and Climate Research, Germany; Visiting Scientist IRRI, Philippines and CSIRO Land & Water, Australia. Further, he has served in the prestigious International Institutes as resource person for course on climate-smart agriculture and participated in more than 70 international symposia/ conferences held in 30 different countries.

He has more than 200 research papers, 31 review papers, 27 popular articles and 14 books to his credit. Further, he possesses h-index of 68 and i10-index of 210 with more than 19,000 citations in international literature. He has been identified among the top 2% of global scientists in Agriculture by Stanford University, USA and ranked 365th in the world and 5th in India in Plant Science & Agronomy by Research.com.

Dr. Himanshu Pathak has been conferred with several International and National awards, along with several recognitions. Few of them are; Rafi Ahmed Kidwai Award of Indian Council of Agricultural Research, Dr. N.S. Randhawa Memorial Award, NAAS, Dr. R.V. Tamhane Memorial Lecture Award by the Indian Society of Soil Science, etc. He is also the member for several Academic and Policy framing bodies, and also for many professional societies.